ಬೆಂಗಳೂರಿನ ಯಕ್ಷಸಿಂಚನ ಟ್ರಸ್ಟ್ (ರಿ)
ನಡೆಸಿದ
ರಾಜ್ಯಮಟ್ಟದ ಯಕ್ಷಗಾನ ಪ್ರಸಂಗರಚನಾ ಸ್ಪರ್ಧೆಯಲ್ಲಿ
ದ್ವಿತೀಯ ಬಹುಮಾನ ವಿಜೇತ

ಯವಕ್ರೀತ ವೃತ್ತಾಂತ

ಹಾಗೂ

ಶ್ರೀಕೃಷ್ಣ ಕಾರುಣ್ಯ (ಭಕ್ತ ಸುದಾಮ)

ಪೌರಾಣಿಕ ಯಕ್ಷಗಾನ ಪ್ರಸಂಗಗಳು



ಕವಿ
ಡಾ. ಶಿವಕುಮಾರ ಅಳಗೋಡು

ಪ್ರಕಾಶಕರು:
ಫಣಿಗಿರಿ ಪ್ರತಿಷ್ಠಾನ
ಶಿರೂರು, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - ೫೭೬೨೨೮

ಬೆಂಗಳೂರಿನ ಯಕ್ಷಸಿಂಚನ ಟ್ರಸ್ಟ್ (ರಿ) ನಡೆಸಿದ
ರಾಜ್ಯಮಟ್ಟದ ಯಕ್ಷಗಾನ ಪ್ರಸಂಗರಚನಾ ಸ್ಪರ್ಧೆಯಲ್ಲಿ
ದ್ವಿತೀಯ ಬಹುಮಾನ ವಿಜೇತ

ಯವಕ್ರೀತ ವೃತ್ತಾಂತ

ಹಾಗೂ

ಶ್ರೀಕೃಷ್ಣ ಕಾರುಣ್ಯ

(ಭಕ್ತ ಸುದಾಮ)

ಪೌರಾಣಿಕ ಯಕ್ಷಗಾನ ಪ್ರಸಂಗಗಳು

ಕವಿ

■ ಡಾ. ಶಿವಕುಮಾರ ಅಳಗೋಡು

ಪ್ರಕಾಶಕರು
ಫಣಿಗಿರಿ ಪ್ರತಿಷ್ಠಾನ
ಶಿರೂರು, ಬೈಂದೂರು ತಾಲೂಕು
ಉಡುಪಿ ಜಿಲ್ಲೆ – ೫೭೬೨೨೮

ಯವಕ್ರೀತ ವೃತ್ತಾಂತ ಹಾಗೂ ಶ್ರೀಕೃಷ್ಣ ಕಾರುಣ್ಯ

ಪೌರಾಣಿಕ ಯಕ್ಷಗಾನ ಪ್ರಸಂಗಗಳು

ಕವಿ: ಡಾ. ಶಿವಕುಮಾರ ಅಳಗೋಡು
ಅಳಗೋಡು, ನಿಟ್ಟೂರು ಅಂ. ಹೊಸನಗರ ತಾ. ಶಿವಮೊಗ್ಗ ಜಿ.
ಮೊ. 9482703082

Mail : nittursshivu@gmail.com

Year of Publication : 2024

No. of Pages : 48

Price : Rs. 50/-

Copy Right : Author

Paper Used : 70gsm Maplitho

Size : 1/8 Demi

Publication : Phanigiri Pratishthana, Shiroor, Byndoor Taluk, Udupi District, Karnataka- 576228

Cover Page : Digantha Printers, Mangaluru

Printed at : Techfiz Inc.,60/46/2, 10th B Main, 1st Block, Jayanagar, Bengaluru - 560011

Cover Page Photo : Dr. Shivakumara Alagodu

■ ಮುನ್ನುಡಿ ■

ಡಾ. ಶಿವಕುಮಾರ ಅಳಗೋಡು ಯಕ್ಷಗಾನ ಕಾವ್ಯಲೋಕದಲ್ಲಿ ಅರಳುತ್ತಿರುವ ಹೊಸಪ್ರತಿಭೆ. ಯಕ್ಷಗಾನ ಛಂದಃಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನಮಾಡಿ, ನೂತನ ಪ್ರಸಂಗಗಳ ರಚನೆಯಲ್ಲಿ ಭರವಸೆ ಮೂಡಿಸಿದ ತರುಣಕವಿ. ಮೂಲತಃ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಿಟ್ಟೂರಿನವರು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರು. 'ಯಕ್ಷಗಾನ ಪೂರ್ವರಂಗ'ದ ಕುರಿತು ಸಂಶೋಧನಾತ್ಮಕ ಮಹಾಪ್ರಬಂಧವನ್ನು ಸಲ್ಲಿಸಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನೂ ಪಡೆದಿದ್ದಾರೆ. ಈಗಾಗಲೇ 'ದೇವಸೇನಾ ಪರಿಣಯ', 'ದಂಡಕ ದಮನ', 'ಶ್ರೀವಿಷ್ಣುಮಾಯಮಾಹಾತ್ಮ್ಯಮ್' ಮುಂತಾದ ಪ್ರಸಂಗಗಳನ್ನು ರಚಿಸಿ ಪ್ರಸಂಗರಚನಾ ಸ್ಪರ್ಧೆಗಳಲ್ಲಿ ವಿಜೇತರಾಗಿ ಬಹುಮಾನಗಳಿಗೂ ಪಾತ್ರರು. ರಂಗದಲ್ಲಿಯೂ ಈ ಪ್ರಸಂಗಗಳು ಯಶಸ್ವಿಯಾಗುತ್ತಿರುವುದು ಗಮನಾರ್ಹ. ಇದೀಗ ಅವರ 'ಯವಕ್ರೀತ ವೃತ್ತಾಂತ' ಮತ್ತು 'ಶ್ರೀಕೃಷ್ಣ ಕಾರುಣ್ಯ' ಎಂಬ ಎರಡು ಕೃತಿಗಳ ಸಂಕಲನ ಪ್ರಕಾಶಕ್ಕೆ ಬರುತ್ತಿದೆ. ಕಥಾವಸ್ತು, ಪಾತ್ರಸೃಷ್ಟಿ, ಭಾಷಾಶೈಲಿ, ರಂಗತಂತ್ರಗಳನ್ನು ಸಮುಚಿತವಾಗಿ ಬಳಸಿಕೊಂಡು ರಂಗದಲ್ಲಿ ಅಭಿನೀತಗೊಳ್ಳಲು ಯೋಗ್ಯವಾಗುವಂತೆ ಈ ಕೃತಿಗಳು ಮೂಡಿ– ಬಂದಿರುವುದು ವಿಶೇಷ. ಯಕ್ಷಗಾನ ಕಾವ್ಯದ ಭವಿಷ್ಯದ ದೃಷ್ಟಿಯಿಂದ ಇದು ಸಮಾಧಾನಕರ ಸಂಗತಿ ಎನ್ನಲೇಬೇಕು.

'ಯವಕ್ರೀತ ವೃತ್ತಾಂತ'ದಲ್ಲಿರುವುದು ಮಹಾಭಾರತದ ವನಪರ್ವದ ಕಥೆ. ಇದರಲ್ಲಿ ೧೧ ಪಾತ್ರಗಳ ಸುತ್ತ ಹೆಣೆದ ಒಟ್ಟು ೧೫೬ ಪದ್ಯಗಳಿವೆ. ವಿಶೇಷವೆಂದರೆ ಇಲ್ಲಿ ೭೦ ವಿವಿಧ ಛಂದೋಬಂಧಗಳಿವೆ. ಈ ಮೂಲಕ ಲಯವೈವಿಧ್ಯವನ್ನು ಸಾಧಿಸಿ ರಂಗದಲ್ಲಿ ಗಾನ–ನೃತ್ಯಗಳ ಅನನ್ಯತೆಗೆ ಪುಷ್ಟಿ ನೀಡಿದಂತಾಗಿದೆ. ಇವುಗಳಲ್ಲಿ ೯ ಸಮೀಕೃತ ಬಂಧಗಳಿರುವುದರಿಂದ ಕಲಾವಿದರ ಸೃಜನಶೀಲತೆಗೂ ಆಸ್ಪದ ನೀಡಿದಂತಾಗಿದೆ. 'ಶ್ರೀಕೃಷ್ಣ ಕಾರುಣ್ಯ' ಭಾಗವತದಲ್ಲಿ ಪ್ರಸಿದ್ಧವಾದ ಕುಚೇಲೋಪಾಖ್ಯಾನದ ಕಥೆಯನ್ನು ಒಳಗೊಂಡಿದೆ. ನಾಲ್ಕೇ ಪಾತ್ರಗಳಿರುವ ಒಟ್ಟು ೬೦ ಪದ್ಯಗಳುಳ್ಳ ಕಿರುಕೃತಿ. ಇದರಲ್ಲಿಯೂ ೨೧ ಛಂದೋಬಂಧಗಳು ಪ್ರಯೋಗಗೊಂಡಿವೆ. ಸಹಜಪ್ರಾಸ, ವರಣಸಂಯೋಜನೆ, ಪಲ್ಲವಿ–ಅನುಪಲ್ಲವಿಗಳ ಜೋಡಣೆಗಳಿಂದ ಈ ಬಂಧಗಳು ಮನೋಹರವೆನಿಸಿವೆ.

ಉದಾ:

ತರಳ ನಿನ್ನಯ ವಾಂಛೆ । ಸರಿಯಲ್ಲ ಫಲವಿಲ್ಲ ।
ಗರುಸೇವೆಯಿಂದಷ್ಟೆ ವೇದ ಸಿದ್ಧಿಪುದು ॥
ಬರಿದೆ ಮತ್ತೇಕೆ ನ– । ಶ್ವರದೇಹಕೀ ಶಿಕ್ಷೆ ।
ನರಜನ್ಮ ಪಿರಿದು ಯೋಚಿಸು ಬಾಳು ಕೆಡದು ॥ (೧–೨೨)

ಇದು 'ತುಜಾವಂತು-ಝಂಪೆ' ಮತ್ತು 'ಮಧ್ಯಮಾವತಿ-ಏಕ'ದ ಸಮೀಕೃತ ಬಂಧ. ಅರ್ಥಾತ್ ಮಾತ್ರಾಗಣ ಮತ್ತು ಅಂಶಗಣಗಳ ದ್ವಿಸಂಧಾನಶಕ್ತಿಯ ಸೃಜನೆ. ಇಲ್ಲಿಯು ಮುಖ್ಯಗಣಗಳು ಪಂಚಮಾತ್ರಾತ್ಮಕವೂ ಹೌದು; ವಿಷ್ಣುಗಣಾತ್ಮಕವೂ ಹೌದು! ಆದುದರಿಂದಲೇ ಎರಡೂ ತಾಳಗಳಿಗೆ ಅವುಗಳು ಹೊಂದಿಕೊಳ್ಳುತ್ತವೆ. ಯಕ್ಷಗಾನಕಾವ್ಯದಲ್ಲಿ ಇಂತಹ ವಿಶೇಷಸೌಂದರ್ಯಗಳಿವೆ ಎಂದು ಇದು ಕೈಬೀಸಿ ಕರೆಯುತ್ತದೆ!

ಸರಿಯೆ ತರಳ ಗುರುವು ನುಡಿಯ- ।
ದರಿವು ಪಡೆದುದು ॥
ವರದ ಬಲದಿ ಗರುವವಡರಿ ।
ಮರಣ ಬರುವುದು ॥ (೧-೫೦)

ಇದು ಭೋಗಷಟ್ಪದಿಯ ದೀರ್ಘಪಾದಗಳನ್ನೆ ಹೊಸೆದು ಸಾಧಿಸಿದ ಚೌಪದಿ. ಇದು 'ಸರ್ವಲಘು'ವಿನಿಂದ ಕೂಡಿರುವುದು ಇನ್ನೊಂದು ವಿಶೇಷ! ಈ ಕಾರಣದಿಂದಾಗಿ ಇದು ನಾದಗುಣಭರಿತವಾಗಿ ಗೇಯತೆಯಲ್ಲಿ ಮನಸೆಳೆಯುತ್ತದೆ.

ಯಕ್ಷಗಾನ ಛಂದಸ್ಸಿನ ಪ್ರಸಿದ್ಧ ಬಂಧಗಳೆಲ್ಲವೂ ಇಲ್ಲಿವೆ. (ಆದರೆ ಯಕ್ಷಗಾನದಲ್ಲಿ ಇವುಗಳಲ್ಲದೆಯೂ ಜಂಜೂಟಿ-ಅಷ್ಟ, ಮುಖಾರಿ-ಏಕ, ಮುಂತಾದ ಇತರ ಪದ್ಯಬಂಧಗಳಿವೆ ಎನ್ನುವುದನ್ನು ಮರೆಯುವಂತಿಲ್ಲ.) ಕೆಲವು ಪದ್ಯಗಳಂತೂ ಓದುವಾಗಲೇ ಮನಸ್ಸಿನೊಳಗೆ ಅನುರಣನಗೊಳ್ಳುತ್ತವೆ. ಉದಾ: 'ಧನ್ಯನಾದೆ ಕರುಣಸಾಗರ' (೧-೪೨), 'ಅಮಮ ಮೋಹಾಕಾರೆಯೀ ನಾರಿ ವೈಯಾರಿ' (೧-೬೧), 'ಪರಿಕಿಸಿದನು ವಿಪ್ರನು-ದ್ವಾರಕೆಯಲಿ-ಮೆರೆವ ವೈಕುಂಠವನು' (೨-೨೬), 'ಗೆಳೆಯ-ನಿನಗೊಲಿದಿಹುದೆನ್ನಯ ಹೃದಯ' (೨-೪೦) ಇತ್ಯಾದಿ.

ಪಾರ್ತಿಸುಬ್ಬನ 'ಉಂಗುರಸಂಧಿ' ಪ್ರಸಂಗದಲ್ಲಿರುವ 'ಮಾತಾಡಬಾರದೇನೇ' ಎಂಬ ಇಪ್ಪತ್ತೈದು ಪಾದಗಳ 'ಗೌಳಪಂತು-ಏಕ'ದ ಪದ್ಯವನ್ನು ಯಕ್ಷಗಾನ ಕಾವ್ಯಲೋಕದ ಅತಿದೀರ್ಘ ಪದ್ಯಬಂಧವೆಂದು ಮಾನಿಸಲಾಗಿದೆ. ಅದನ್ನೇ ಹೋಲುವ ಒಂದು ಪದ್ಯ ಇಲ್ಲಿರುವುದು ಗಮನಾರ್ಹ. "ಬಂದೆಯ ಚೆಲುವೆ ನೀನು-ಪಂಚಾಸ್ತ್ರದಿ-ನೊಂದು ನಾ ಬೆಂದಿಹೆನು" (೧-೯೦) ಎಂಬ ಈ ರಚನೆ ಭಾಷೆ-ಭಾವ-ಬಂಧಗಳ ಸಂಲಗ್ನತೆಯಿಂದ ಹಾಗೂ ಅಂಶ-ಮಾತ್ರಾಮಿಶ್ರಣದ ಗತಿಯಿಂದ ಸುಮನೋಹರ ಆಗಿದೆ. ಪ್ರಾಚೀನ ಪ್ರಸಂಗಗಳಲ್ಲಿರುವ ಇಂತಹ ಗುಣವಿಶೇಷಣಗಳನ್ನು ಆಧುನಿಕಕಾಲದ ಕವಿಗಳು ಅನುಸರಿಸುವುದರಲ್ಲಿಯೂ 'ಯಕ್ಷಗಾನ ಪರಂಪರೆ'ಯ ಅನುಸಂಧಾನವಿದೆ ಎಂಬುದನ್ನು ಮರೆಯಬಾರದು.

ಯಕ್ಷಗಾನಪದ್ಯಗಳು ಕೇವಲ ಕಥಾನುವರ್ತಿಯಾಗಿ ಸಾಗದೆ, ತನ್ನೊಡಲಿನೊಳಗೆ ಅರ್ಥಾಲಂಕಾರದ ಚೆಲುವನ್ನೂ ಮೈಯ್ದುಗೊಡಿಸಿಕೊಳ್ಳಬೇಕು. ಆಗಲೇ ಅದಕ್ಕೆ ಕಾವ್ಯದ ಗೌರವ ಪ್ರಾಪ್ತಿಯಾಗುವುದು ಮತ್ತು ಕಲಾವಿದರ ವಾಚಿಕಾಭಿನಯಕ್ಕೆ ಗ್ರಾಸವೀಯುವುದು. ಈ ಕೃತಿಗಳ ನಡುವೆ ಕೇಳಿಸುವ ಕೆಲವು ಸಾಲುಗಳು ಅಂತಹ ಕಾವ್ಯಗುಣವನ್ನು ಪಡೆದಿವೆ ಎಂಬುದು ಮೆಚ್ಚತಕ್ಕ ಅಂಶ. ಉದಾ:

‘ಪುತ್ರವಿರಹಿತ ಪಿತನು ಪತ್ರಫಲರಹಿತ ತರು’, ‘ಕೊಂದವರಿಗೆ ಕೊಲೆಯೆಂದಿಗು ತಪ್ಪದು’, ‘ಬರಲಾರಳಿಂದಿರೆಯು ಕರೆದವರ ಮನೆಗೆ’, ‘ಪರರಿದಿರು ಬೇಡಿದರೆ ಸಿರಿಗಾಗಿ ಕಿರಿದಹೆವು’, ‘ಬಾಳಿನನುಭವವೊಂದೆ ಮೇಲಾಗಿಹುದು’ ಇತ್ಯಾದಿ. ಹಳೆಗನ್ನಡದ ಕಳವೆ (ಭತ್ತ), ಎರೆಯ (ನಲ್ಲ), ತವಸಿ (ತಪಸ್ವಿ), ಬಿಡದಿ (ವಸತಿ) ಮುಂತಾದವುಗಳೊಂದಿಗೆ ಮಂತ್ರಮಾರ್ಗ, ಅಜ್ಞಾನಗಿರಿ, ಪುಣ್ಯಕಮಂಡಲ, ಭಕುತಿರಸಜಡ ಮುಂತಾದ ಪದಪುಂಜಗಳ ಪ್ರಯೋಗ ಯಕ್ಷಗಾನದ ಭಾಷಾಮರ್ಯಾದೆಯನ್ನು ಕಾಪಿಡುವಂತಹುದು. ಹೀಗೆ ಭಾಷೆ, ಬಂಧ, ಭಾವ, ಬನಿಗಳಿಂದ ಇಲ್ಲಿಯ ರಚನೆಗಳು ಕಾವ್ಯರಸಿಕರಿಗೆ ಸುಖಪ್ರದವಾಗಿವೆ ಎನ್ನಬಹುದು.

ಡಾ. ಶಿವಕುಮಾರ ಅಳಗೋಡು ಅವರು ಪೌರಾಣಿಕ ಕಥನಗಳನ್ನು ಹೊಸದೃಷ್ಟಿಯಿಂದ ನೋಡಿ ನೂತನಕೃತಿಗಳನ್ನು ರಚಿಸುವತ್ತ ಮನಸ್ಸು ಮಾಡಿದರೆ ಯಕ್ಷಗಾನದಲ್ಲಿ ಹೊಸದೊಂದು ಯುಗ ಸಾಧ್ಯವಾಗಬಹುದು. ಪ್ರಾಚೀನ ಛಂದೋಬಂಧಗಳ ಬೆಳಕಿನಲ್ಲಿ ವಿನೂತನ ಪದ್ಯಬಂಧಗಳ ಸೃಜನೆಯ ಕಡೆಗೂ ಅವರು ಪ್ರಯತ್ನಿಸಬಹುದು. ಅದಕ್ಕೆ ಬೇಕಾದ ಪ್ರತಿಭೆ ಮತ್ತು ಪಾಂಡಿತ್ಯಗಳ ಎರಕ ಅವರಿಗೆ ಈಗಾಗಲೇ ಕೈವಶವಾಗಿದೆ. ಅದಕ್ಕೆ ‘ಪುಟ’ ಕೊಡುವ ಕಾವ್ಯತಪಸ್ಸನ್ನು ಅವರು ಕೈಗೊಳ್ಳಬೇಕಷ್ಟೆ! ‘ಕನ್ನಡಗೀರ್ವಾಣಿ’ ಅವರಿಗೆ ಆ ಶಕ್ತಿಯನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ. ಈ ಸಂಕಲನವನ್ನು ಪ್ರಕಟಿಸುತ್ತಿರುವ ‘ಫಣಿಗಿರಿ ಪ್ರತಿಷ್ಠಾನ’ದ ಮಿತ್ರ ಶ್ರೀ ಉಮೇಶ್ ಶಿರೂರು ಅವರನ್ನೂ ಅಭಿನಂದಿಸುತ್ತೇನೆ.

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ದಿನಾಂಕ : 25-11-2024

■ ಪ್ರಕಾಶಕರ ನುಡಿ ■

ಬಹುಮುಖ ಪ್ರತಿಭೆಯ ಯುವ ಛಂದೋಬದ್ಧ ಯಕ್ಷಗಾನ ಕವಿ ಡಾ. ಶಿವಕುಮಾರ ಅಳಗೋಡು ರಚಿಸಿರುವ ಎರಡು ಪ್ರಸಂಗ ಕೃತಿಗಳನ್ನು ಫಣಿಗಿರಿ ಪ್ರತಿಷ್ಠಾನದ ಹದಿಮೂರು ಮತ್ತು ಹದಿನಾಲ್ಕನೆಯ ಯಕ್ಷಗಾನ ಪ್ರಸಂಗ ಕೃತಿಗಳನ್ನಾಗಿ ಪ್ರಕಟಿಸಲು ಸಂತೋಷವಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ನಮ್ಮ ತಂದೆ ಶಿರೂರು ಫಣಿಯಪ್ಪಯ್ಯನವರ ತಾಳೆಗರಿ ಹಾಗೂ ಹಸ್ತಪ್ರತಿ ಸಂಗ್ರಹದ, ಮೂಲಿಕೆ ವೆಂಕಣ್ಣ ಕವಿಯ 'ಮಾನಸ ಚರಿತ್ರೆ', ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ ಕಂಸವಧೆ', ರತ್ನಾಪುರದ ರಾಮ ಕವಿಯ 'ಮೂಲಕಾಸುರ ಕಾಳಗ' ಪ್ರಸಂಗ ಕಾವ್ಯಗಳನ್ನು, ಶಿರೂರು ಫಣಿಯಪ್ಪಯ್ಯನವರ ಎಂಟು ಪ್ರಸಂಗ ಕೃತಿಗಳನ್ನು, ಕ.ಪು ಸೀತಾರಾಮ ಕೆದಿಲಾಯರ 'ಶಲ್ಯಪರ್ವ-ಗದಾಪರ್ವ' ಪ್ರಗಂಗವನ್ನು ಪ್ರಕಟಿಸಿದ ನಮ್ಮ ಪ್ರತಿಷ್ಠಾನ, ಈ ವರ್ಷ ಯುವ ಯಕ್ಷಕವಿ ಡಾ. ಶಿವಕುಮಾರ ಅಳಗೋಡು ಇವರು ರಚಿಸಿರುವ ರಾಜ್ಯಮಟ್ಟದ ಯಕ್ಷಗಾನ ಪ್ರಸಂಗರಚನಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ವಿಜೇತ 'ಯವಕ್ರೀತ ವೃತ್ತಾಂತ' ಹಾಗೂ 'ಶ್ರೀ ಕೃಷ್ಣ ಕಾರುಣ್ಯ' (ಭಕ್ತ ಸುದಾಮ) ಪ್ರಸಂಗ ಕೃತಿಗಳನ್ನು ಯಕ್ಷಪ್ರಸಂಗಸಾಹಿತ್ಯ ಲೋಕಕ್ಕೆ ಸಮರ್ಪಿಸುತ್ತಿದೆ.

ಯಕ್ಷಗಾನ ಕಲಾವಿದರಾಗಿ, ಅರ್ಥದಾರಿಯಾಗಿ, ಪ್ರಸಂಗ ಕವಿಯಾಗಿ, ಉಪನ್ಯಾಸಕರಾಗಿ ಗುರುತಿಸಿಕೊಂಡಿರುವ ಡಾ. ಶಿವಕುಮಾರ ಅಳಗೋಡು 'ಯಕ್ಷಗಾನ ಪೂರ್ವರಂಗ' ವಿಷಯದಲ್ಲಿ ಹಂಪಿ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದ ಪ್ರತಿಭಾನ್ವಿತರು. ಯಕ್ಷಗಾನದ 70ಕ್ಕೂ ಅಧಿಕ ವಿವಿಧ ಮಟ್ಟುಗಳನ್ನು ಬಳಸಿ ಛಂದೋಬದ್ದ ಯಕ್ಷಗಾನ ಪ್ರಸಂಗ ಬರೆದಿರುವುದು ಇವರ ಕೌಶಲ್ಯಕ್ಕೆ ಸಾಕ್ಷಿ.

ನಮ್ಮ ಹಿಂದಿನ ಎಲ್ಲ ಪ್ರಸಂಗ ಕೃತಿಗಳ ಸಂಪಾದಕರಾದ ನಾಡಿನ ಹಿರಿಯ ವಿದ್ವಾಂಸರಾದ ಡಾ. ಕಬ್ಬಿನಾಲೆ ವಸಂತ ಭರದ್ವಾಜರು ಈ ಕೃತಿಗೆ ಮುನ್ನುಡಿ ಬರೆದು ಯುವ ಕವಿಯನ್ನು ಆಶೀರ್ವದಿಸಿದ್ದಾರೆ.

ನಮ್ಮ ಫಣಿಗಿರಿ ಪ್ರತಿಷ್ಠಾನಕ್ಕೆ ಪ್ರಸಂಗ ಕೃತಿಗಳನ್ನು ಪ್ರಕಟಿಸಲು ನೀಡಿದ ಡಾ. ಅಳಗೋಡು, ಮುನ್ನುಡಿ ಬರೆದ ಡಾ. ಕಬ್ಬಿನಾಲೆ, ಅಂದವಾಗಿ ಮುದ್ರಿಸಿಕೊಟ್ಟ ಓಂಶಿವಪ್ರಕಾಶ ಇವರಿಗೂ ವಂದನೆಗಳು.

ದಿನಾಂಕ : 24-11-2024

ಉಮೇಶ ಶಿರೂರು

ಚರವಾಣಿ : 9448353910

■ ಕಬ್ಬಿಗನ ಉಲಿ ■

ನಾನು ಪ್ರಥಮ ಬಿ.ಎ. ವಿದ್ಯಾರ್ಥಿಯಾಗಿದ್ದಾಗ ಸಾಮಾಜಿಕ ಕಥೆಯೊಂದನ್ನು ಹೊಂದಿಸಿ ರಚಿಸಿದ 'ಯುಗ್ಮತಾರೆ' ಪ್ರಸಂಗವು ಪ್ರದರ್ಶನವನ್ನೂ ಕಂಡಿತ್ತು. ಆ ಹಂತದಲ್ಲಿ ಛಂದಸ್ಸಿನ ಕುರಿತು ಹೆಚ್ಚಿನ ಅರಿವಿರಲಿಲ್ಲವಾದ್ದರಿಂದ ಅದನ್ನು ಪ್ರದರ್ಶನ ಒಂದಕ್ಕಷ್ಟೇ ಸೀಮಿತಗೊಳಿಸಿದೆ. ಎರಡನೆಯ ವರ್ಷದ ಪದವಿ ವಿದ್ಯಾರ್ಥಿಯಾಗಿದ್ದಾಗ ರಚಿಸಿ, ಸ್ನಾತಕೋತ್ತರ ಪದವಿ ಹಂತದಲ್ಲಿ ಕೃತಿಯಾಗಿಸಿ ಪ್ರಕಟಿಸಿದ 'ಮಹೀಂದ್ರ ಮಹಾಭಿಷ' ಪೌರಾಣಿಕ ಪ್ರಸಂಗದಿಂದ ತೊಡಗಿ, ಈವರೆಗೆ ೭ ಪ್ರಸಂಗಗಳನ್ನು ರಚಿಸಿ ಪ್ರಕಟಿಸುವ ಅವಕಾಶ ಲಭಿಸಿತು.

ರವಿ ಮಡೋಡಿ ನೇತೃತ್ವದ ಬೆಂಗಳೂರಿನ ಯಕ್ಷಚಿಂಚನ ಟ್ರಸ್ಟ್(ರಿ) ಮೊದಲ ಬಾರಿ ನಡೆಸಿದ ಯಕ್ಷಗಾನ ಪ್ರಸಂಗರಚನಾ ಸ್ಪರ್ಧೆಯಲ್ಲಿ 'ದೇವಸೇನಾ ಪರಿಣಯ'ಕ್ಕೆ ಪ್ರಥಮ ಬಹುಮಾನ ಪಡೆದ ಮೇಲೆ, ಮತ್ತೊಮ್ಮೆ ಸ್ಪರ್ಧೆ ಆಯೋಜಿಸಿದಾಗ ಅದಕ್ಕಾಗಿ 'ಯವಕ್ರೀತ ವೃತ್ತಾಂತ' ಪ್ರಸಂಗ ರಚಿಸಿ ಕಳಿಸಿದೆ. ಹಿರಿಯರಾದ ಶ್ರೀಧರ ಡಿ.ಎಸ್, ಎ.ಪಿ. ಫಾಟಕ್, ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ ಈ ನಾಲ್ವರು ವಿದ್ವಾಂಸರ ಅಭಿಮತದಂತೆ ದ್ವಿತೀಯ ಬಹುಮಾನ ಲಭಿಸಿತು. 'ಗುರುವಿನ ಮಹತ್ತ್ವ'ವನ್ನು ಸಾರುವ ಕಥೆಯನ್ನು ಪ್ರಸಂಗ-ವಾಗಿಸಬೇಕೆಂಬ ಹಂಬಲವಿದ್ದುದರಿಂದ ಇದೇ ಪ್ರಸಂಗ ರಚಿಸಿದೆ. ರಂಗದಲ್ಲಿ ಈ ಕಥೆಯ ಪ್ರಯೋಗಸಾಧ್ಯತೆಯನ್ನು ಲಕ್ಷಿಸಿ ದ್ವಿತೀಯ ಬಂತೆಂದು ತಿಳಿದಾಗ ನೋವಾಗಲಿಲ್ಲ, ೭೦ಛಂದಸ್ಸುಗಳನ್ನು ಸಮರ್ಥವಾಗಿ ಬಳಸಿದ ತೃಪ್ತಿ ಲಭಿಸಿತು. ನಮ್ಮವರೇ ಆಗಿರುವ ಹಿಳ್ಳೋಡಿ ಬಾಲಣ್ಣ ಅವರ ನಹುಷನ ಕಥೆಯ ಪ್ರಸಂಗಕ್ಕೆ ಪ್ರಥಮ ಬಹುಮಾನ ಬಂದಿದ್ದೂ ಸಂತಸದ ಸಂಗತಿಯೇ ಆಗಿತ್ತು.

ಬಹಳ ಕಾಲದ ಹಿಂದೆ ಉಡುಪಿಯ ಎಂ.ಜಿ.ಎಂ ಕಾಲೇಜಿನ ರವೀಂದ್ರ ಮಂಟಪದಲ್ಲಿ ಗಿರೀಶ್ ಕಾರ್ನಾಡರ 'ಅಗ್ನಿ ಮತ್ತು ಮಳೆ' ನಾಟಕ ನೋಡಿದಾಗ ಯವಕ್ರೀತನ ಕಥೆ ಗಮನ ಸೆಳೆದಿತ್ತು. ಮೂಲವನ್ನು ಅರಿಯಬೇಕೆಂದು ಮಹಾಭಾರತವನ್ನು ಅವಲೋಕಿಸಿದೆ. ಪೂರ್ಣವಾಗಿ ಮೂಲದ ಆಶಯಕ್ಕೆ ನಿಷ್ಠನಾಗಿ ಪ್ರಸಂಗ ರಚಿಸಿದೆ. ಪ್ರಶಸ್ತಿ ಬಂದು ಸುಮಾರು ತಿಂಗಳು ಕಳೆದ ಮೇಲೆ ಉಡುಪಿಯ ಕಲಾರಂಗದ ಸಂಯೋಜನೆಯಲ್ಲಿ ನಡೆದ ಐ.ಡಿ. ಗಣಪತಿಯವರ ರಚನೆಯ 'ಯವಕ್ರೀತೋಪಾಖ್ಯಾನ' ಪ್ರಸಂಗ ನೋಡಿದೆ. ಅದಕ್ಕಿಂತ ಮೊದಲೇ ನನ್ನ ಪ್ರಸಂಗ ರಚನೆಯಾಗಿತ್ತು. ಅವರ ಪ್ರಸಂಗಕ್ಕೂ ನನ್ನದಕ್ಕೂ ಮೂಲ ಆಶಯದಲ್ಲಿ ಸ್ವಲ್ಪಾಂಶ ಸಾಮ್ಯವಿದ್ದರೂ ಅವರು ಆಕರವಾಗಿ ಬಳಸಿಕೊಂಡ ಮೂಲ, ನಾನು ಬಳಸಿದ ವನಪರ್ವದ ಮೂಲಕ್ಕಿಂತ ವಿಭಿನ್ನವಾಗಿತ್ತು.

'ಶ್ರೀಕೃಷ್ಣ ಕಾರುಣ್ಯ' ತಾಳಮದ್ದಳೆ ಪ್ರಯೋಗಕ್ಕಾಗಿ ರಚಿಸಿದ್ದು. ಈ ಸಂದರ್ಭದಲ್ಲಿ ಗುರುಗಳಾದ ಗಣೇಶ ಕೊಲೆಕಾಡಿಯವರ 'ಶ್ರೀಧಾಮ', ಬೊಟ್ಟಿಕೆರೆ ಪುರುಷೋತ್ತಮ ಪೂಂಜರ 'ಭಕ್ತ ಕುಚೇಲ', ಡಾ. ಕಬ್ಬಿನಾಲೆ ವಸನ್ತ ಭಾರದ್ವಾಜರ 'ಬಜಿಲ್ ನೈವೇದ್ಯೊ' (ಶಿವಳ್ಳಿ ತುಳು) ಪ್ರಸಂಗಗಳನ್ನು ಅವಲೋಕಿಸಿ, ನನ್ನ ಕಲ್ಪನೆಗೆ

ಆದ್ಯತೆ ನೀಡಿ ಈ ಪ್ರಸಂಗವನ್ನು ರಚಿಸಿದೆ. ತಾಳಮದ್ದಳೆ ಪ್ರದರ್ಶನದಲ್ಲಿ ಉತ್ತಮ ಪ್ರತಿಕ್ರಿಯೆ ಲಭಿಸಿದ ಬಳಿಕ ಪ್ರಸಂಗವನ್ನು ಮತ್ತಷ್ಟು ವಿಸ್ತೃತಗೊಳಿಸಿ ಪರಿಷ್ಕರಿಸಿದೆ.

ಈಗ ಈ ಎರಡೂ ಪ್ರಸಂಗಗಳು ಕೃತಿಯಾಗಿ ಪ್ರಕಟಗೊಳ್ಳುತ್ತಿವೆ. 'ಪಾರ್ತಿಸುಬ್ಬ', 'ರಾಜ್ಯೋತ್ಸವ' ಮೊದಲಾದ ಮೌಲಿಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ಈ ಪ್ರಸಂಗಗಳನ್ನು ಆದ್ಯಂತ ಪರಿಶೀಲಿಸಿ, ಕೆಲವು ಪದಪ್ರಯೋಗದ ಅನೌಚಿತ್ಯವನ್ನು ತಿದ್ದುವುದಕ್ಕೆ ಸೂಚಿಸಿ ಅರ್ಥಪೂರ್ಣವಾದ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ತಮ್ಮ 'ಕನಕ ತರಂಗಿಣಿ' ಮಹಾಕಾವ್ಯದ ಲೋಕಾರ್ಪಣೆಯಂದು ಆ ಕಾವ್ಯದ ಬಗೆಗೆ ಮಾತಾಡುವುದಕ್ಕೆ ಅವಕಾಶವನ್ನು ಕೊಟ್ಟು, ಬೆನ್ನು ತಟ್ಟಿದವರಿವರು. ತಮಗೆ 'ಮುಳಿಯ ತಿಮ್ಮಪ್ಪಯ್ಯ'ನವರ ಪ್ರಶಸ್ತಿ ಬಂದಾಗ ಅಭಿನಂದನ ಭಾಷಣಕ್ಕೆ ನನ್ನ ಹೆಸರನ್ನು ಸೂಚಿಸಿ ಬೆಳೆಸಿದವರು.

ಫಣಿಗಿರಿ ಪ್ರತಿಷ್ಠಾನದ ಉಮೇಶ್ ಶಿರೂರು ಇವರ ಪರಿಚಯವಾಗಿದ್ದೂ ಭಾರದ್ವಾಜರಿಂದಲೇ. ಅವರ ತಂದೆಯವರಾಗಿರುವ ಶಿರೂರು ಫಣಿಯಪ್ಪಯ್ಯ ಅವರು ರಚಿಸಿದ, ಸಂಗ್ರಹಿಸಿದ ಪ್ರಸಂಗಗಳ ಸಂಪುಟವೊಂದರ ಕುರಿತು ಮಾತಾಡುವ ಅವಕಾಶವೂ ಭಾರದ್ವಾಜರಿಂದಲೇ ಲಭಿಸಿತ್ತು. ಆ ಬಳಿಕ ಮಂಗಳೂರು ಆಕಾಶವಾಣಿಯ 'ಕೃತಿಸಂಪದ' ಕಾರ್ಯಕ್ರಮದಲ್ಲಿ ಇದೇ ಸಂಪುಟದ 'ಮೂಲಕಾಸುರ ಕಾಳಗ' ಹಾಗೂ 'ಬಿಲ್ಲಹಬ್ಬ – ಕಂಸವಧೆ' ಪ್ರಸಂಗವನ್ನು ಪರಿಚಯಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಕಾರ್ಯಚಟುವಟಿಕೆಯನ್ನು ನಿರಂತರ ಗಮನಿಸುತ್ತ, ಪ್ರೋತ್ಸಾಹಿಸುತ್ತಿರುವ ಶಿರೂರು ಉಮೇಶರ ಕಲಾಪ್ರೀತಿ ಅಪೂರ್ವವಾದುದು. ಕಲಾಸಕ್ತರೂ, ಕಲಾಪೋಷಕರೂ ಆಗಿರುವ ಉಮೇಶರು ಈ ಕೃತಿಗಳ ಪ್ರಕಟಣೆಯ ಹೊಣೆ ಹೊತ್ತು ಬೆಂಬಲಿಸಿದ್ದಾರೆ.

ಡಾ. ಭಾರದ್ವಾಜರಿಗೂ, ಶಿರೂರು ಉಮೇಶರಿಗೂ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಕೃತಿಯನ್ನು ಮುದ್ರಿಸಿದ ಓಂಶಿವಪ್ರಕಾಶ ಅವರಿಗೂ ವಂದನೆಗಳು. ಸದಾ ನನ್ನ ಚಟುವಟಿಕೆಯನ್ನು ಬೆಂಬಲಿಸುತ್ತ, ಪುರಾಣಪ್ರಪಂಚದ ಬಗೆಗೆ ನಿಖರವಾಗಿ ತಿಳಿಸಿಕೊಡುತ್ತ, ಎಲ್ಲ ವಿಭಾಗದಲ್ಲಿಯೂ ಗುರುಗಳಾಗಿರುವ ಶ್ರೀಧರ ಡಿ.ಎಸ್ ಅವರಿಗೂ, ಗುರು ಗಣೇಶ ಕೊಲೆಕಾಡಿಯವರಿಗೂ ಎಲ್ಲ ಗುರು, ಹಿರಿಯರು, ನಾನು ಅಚಲವಾಗಿ ನಂಬಿರುವ ಶ್ರೀ ಬಂಗಾರಮಕ್ಕಿಯ ವೀರಾಂಜನೇಯ ದೇವರ ಪಾದಪದ್ಮಗಳಿಗೆ ವಿನೀತಭಾವದಿಂದ ತಲೆ ಬಾಗಿ ವಂದಿಸುತ್ತೇನೆ. ಈ ಕೃತಿಯು ಇನ್ನು ಲೋಕದ ರತ್ನ. ಲೋಕದ ಕಲಾಸಕ್ತ ಬಂಧುಗಳು ಇದನ್ನು ಎತ್ತಿ ಆಡಿಸಿ ಪೋಷಿಸಬೇಕೆಂದು ಸಮಸ್ತ ಸಹೃದಯರಲ್ಲಿ ಪ್ರಾರ್ಥಿಸುತ್ತ, ನನ್ನ ನಲ್ಮೆಯ ಕೂಸನ್ನು ನಿಮ್ಮ ಮುಂದಿಡುತ್ತಿದ್ದೇನೆ. ವಂದನೆಗಳು.

ಡಾ. ಶಿವಕುಮಾರ ಅಳಗೋಡು

ದಿನಾಂಕ : 26-11-2024

ಯವಕ್ರೀತ ವೃತ್ತಾಂತ

■ ಕಥಾ ಸಾರ ■

ಶ್ರೀಮನ್ಮಹಾಭಾರತದ ವನಪರ್ವದಲ್ಲಿನ ಏಳನೆಯ ಸಂಪುಟದಲ್ಲಿ, ಲೋಮಶ ಮುನಿಗಳು ಧರ್ಮರಾಜನಿಗೆ ಹೇಳಿದ ಕಥೆ ಇದಾಗಿದೆ. ಭರದ್ವಾಜ ಮುನಿಯ ಮಗನಾದ ಯವಕ್ರೀತನು, ದೇವೇಂದ್ರನನ್ನು ಕುರಿತು ತಪಸ್ಸನ್ನಾಚರಿಸುತ್ತಾನೆ. ಆತನಿಂದ ವೇದವಿದ್ಯೆಗಳ ಸಿದ್ಧಿಯನ್ನು ಆರ್ಜಿಸಿಕೊಂಡು ಗರ್ವಿಷ್ಠನಾಗಿ, ರೈಭ್ಯಮುನಿಯ ಸೊಸೆಯನ್ನು ಬಲವಂತದಿಂದ ಭೋಗಿಸಿ, ರೈಭ್ಯನಿಂದ ಮರಣ ಹೊಂದುತ್ತಾನೆ. ಪುತ್ರಶೋಕದಿಂದ ತಪ್ತನಾದ ಭರದ್ವಾಜ, ರೈಭ್ಯನಿಗೆ ಆತನ ಹಿರಿಯ ಮಗನಿಂದಲೇ ಮರಣ ಸಂಭವಿಸಲೆಂದು ಶಪಿಸಿ, ತಾನೂ ಮರಣಿಸುತ್ತಾನೆ. ರೈಭ್ಯ ಶಾಪಫಲದಂತೆ ತನ್ನ ಹಿರಿಯ ಮಗನಾದ ಪರಾವಸುವಿನಿಂದಲೇ ಹತನಾಗುತ್ತಾನೆ. ಬಳಿಕ ರೈಭ್ಯನ ಮಗನಾದ ಅರ್ವಾವಸುವಿನಿಂದ ಸೂರ್ಯಸಾಕ್ಷಾತ್ಕಾರವಾಗಿ ಯವಕ್ರೀತನಾದಿಯಾಗಿ ಮೃತರಾದವರೆಲ್ಲರೂ ಮತ್ತೆ ಮರುಜನ್ಮವನ್ನು ಹೊಂದುತ್ತಾರೆ. ಗುರುವಿನ ಕಾರುಣ್ಯವಿಲ್ಲದೇ ವಿದ್ಯೆಯನ್ನು ಪಡೆದರೆ ಆಗುವ ದುರಂತವನ್ನು ಈ ಕಥೆ ಬಹಳ ಸೊಗಸಾಗಿ ವರ್ಣಿಸುತ್ತದೆ.

■ ಪ್ರಧಾನ ಪಾತ್ರಗಳು ಮತ್ತು ಪೋಷಕ ಪಾತ್ರಗಳು

೧. **ಯವಕ್ರೀತ** ೨. **ಭರದ್ವಾಜ** ೩. **ರೈಭ್ಯ**
೪. **ಪರಾವಸು** (ರೈಭ್ಯನ ಹಿರಿಯ ಪುತ್ರ)
೫. **ಅರ್ವಾವಸು** (ರೈಭ್ಯನ ಕಿರಿಯ ಪುತ್ರ)
೬. **ಶೃಂಖಲೆ** (ಪರಾವಸುವಿನ ಹೆಂಡತಿ)
೭. **ದೇವೇಂದ್ರ** ೮. **ವೃದ್ಧ ಬ್ರಾಹ್ಮಣ** (ಬ್ರಾಹ್ಮಣರೂಪಿ ದೇವೇಂದ್ರ)
೯. **ಅನಲಾಂಗ** (ಯವಕ್ರೀತ ವಧೆಗಾಗಿ ಸೃಷ್ಟಿಗೊಂಡ ಕೃತ್ಯ)
೧೦. **ಸೂರ್ಯ** ೧೧. **ಬೃಹದ್ಯುಮ್ನ** (ನಿಷಧದ ರಾಜ)

ಬೆಂಗಳೂರಿನ ಯಕ್ಷಸಿಂಚನ ಟ್ರಸ್ಟ್ (ರಿ) ನಡೆಸಿದ
ರಾಜ್ಯಮಟ್ಟದ ಯಕ್ಷಗಾನ ಪ್ರಸಂಗರಚನಾ ಸ್ಪರ್ಧೆಯಲ್ಲಿ
ದ್ವಿತೀಯ ಬಹುಮಾನ ವಿಜೇತ

ಯವಕ್ರೀತ ವೃತ್ತಾಂತ

■ ಕವಿ : ಡಾ. ಶಿವಕುಮಾರ ಅಳಗೋಡು

॥ **ಭಾಮಿನಿ** ॥
ಆದಿಯಲಿ ನಿರ್ವಿಘ್ನದಾಯಕ– ।
ನಾದ ವಿಘ್ನೇಶ್ವರನಿಗೊಂದಿಸಿ ।
ಸಾದರದಿ ಬಂಗಾರಮಕ್ಕಿಯ ಹನುಮನನು ನುತಿಸಿ ॥
ಬೇದಬಿಜ್ಜೆಗನರಸಿ ವಾಣಿಯ ।
ಪಾದಪಂಕಜಕೆರಗಿ ವಿದ್ಯೆಯ ।
ಮೋದದಿಂದೊಲಿದಿತ್ತು ಸುಜ್ಞಾನವನು ನೀಡೆನುತ ॥ ೧ ॥

॥ **ವಾರ್ಧಕ** ॥
ಕಣಿಪುರದ ಪಾರ್ತಿಸುಬ್ಬನು ದೇವಿದಾಸ ಹಲ– ।
ಸಿನಹಳ್ಳಿ ವಿಷ್ಣುವಾರಂಬಳ್ಳಿ ನಗಿರೆ ಸು– ।
ಬ್ಬನು ರಾಮಭಟ್ಟ ಸೀತಾನದಿಯ ಗಣಪಯ್ಯ ಪಾಂಡೇಶ್ವರದ ವೆಂಕಟ ॥
ನೆನೆಯೆ ಕೀರಿಕ್ಕಾಡು ವಿಷ್ಣುಮಾಸ್ತರು ಮುದ್ದ– ।
ಣನು ಸಿಮಂತೂರು ಹೊಸ್ತೋಟ ಕಡತೋಕ ಧರೆ– ।
ಮನೆಯ ಶ್ರೀಧರ ಗುರು ಗಣೇಶ ಕೊಲೆಕಾಡಿ ಮೊದಲಾದ ಕವಿಗಳಿಗೆರಗುವೆ ॥
॥ ೨ ॥

॥ **ಭಾಮಿನಿ** ॥
ಯಕ್ಷಸಿಂಚನ ಬಳಗ ನಡೆಸಿದ ।
ಯಕ್ಷಗಾನ ಪ್ರಸಂಗ ರಚನೆಯ ।
ಸೂಕ್ಷ್ಮ ಸ್ಪರ್ಧೆಗೆ 'ದೇವಸೇನಾ ಪರಿಣಯ'ವ ಬರೆದೆ ॥
ಈಕ್ಷಿಸಿದ ವಿದ್ವಾಂಸರುರೆ ನಿ– ।
ಷ್ಪಕ್ಷಪಾತದಿ ಘೋಷಿಸಲು ಸಭೆ– ।
ಸಾಕ್ಷಿಯಾಗಿರೆ ಮೊದಲ ಬಹುಮಾನವನು ಪಡೆಯುತಲಿ ॥ ೩ ॥

॥ **ಭಾಮಿನಿ** ॥
ಮರು ವರುಷದಲಿ ಯಕ್ಷಕಾವ್ಯವ ।
ಬರೆವ ಸ್ಪರ್ಧೆಗೆ ಕಥೆಯನಾರಿಸಿ ।
ವಿರಚಿಸಿದೆ 'ಯವಕ್ರೀತ ವೃತ್ತಾಂತ'ವನು ಮನವಿರಿಸಿ ॥
ಪರಿಕಿಸಿದ ಪಂಡಿತರ ಮೂಲಕ ।
ಎರಡನೆಯ ಬಹುಮಾನ ಲಭಿಸಿತು ।
ಹರುಷದಿಂದಿದ ತಿದ್ದಿ ಕೃತಿಯಾಗಿಸುತ ನೀಡುತಿಹೆ ॥ ೪ ॥

॥ **ದ್ವಿಪದಿ** ॥
ಆ ಮಹಾಭಾರತದ ವನಪರ್ವದೊಳಗೆ ।
ಲೋಮಶರು ಧರ್ಮಜನಿಗೊರೆದ ಕಥೆ ಹೀಗೆ ॥ ೫ ॥
ಗುರುಕೃಪೆಯನವಗಣಿಸಿ ಯವಕ್ರೀತ ಮುನಿಯು ।
ವರವಾಂತು ಮೃತನಾದ ಸತ್ತ್ವಯುತ ಕಥೆಯು ॥ ೬ ॥

॥ **ಸೌರಾಷ್ಟ್ರ ತ್ರಿವುಡೆ** ॥
ಸುರಪುರದ ವಿಷ್ಟರದಿ ಶಕ್ರನು ।
ಮೆರೆಯೆ ತ್ರೈಮೂರ್ತಿಗಳ ಕರುಣದಿ ॥
ಅರಿವಿನಾಗರವಾದುದೋಲಗ । ವಿರಚಿಸಲ್ಕೆ ॥ ೭ ॥
ಸೊಗದ ಸಗ್ಗದ ಧರ್ಮಸಭೆಯಲಿ ।
ಮಘವ ದಿಕ್ಪತಿವೃಂದ ನೆರೆಹುತ ॥
ಜಗದ ಕಲ್ಯಾಣವನು ಸಾಧಿಸೆ । ಬಗೆದ ಮನದಿ ॥ ೮ ॥
ದೊರೆತನವು ಸಿರಿತನವು ಶೂನ್ಯವು ।
ಗುರುವಿನಾಶೀರ್ವಾದವಿರದಿರೆ ॥
ಮರೆತು ವರ್ತಿಸುತಿರುವ ಮನುಜರಿ । ಗರುಹಲೊಳಿತು ॥ ೯ ॥

॥ **ತುಜಾವಂತು ಝಂಪೆ** ॥
ಮರೆವು ಮೇಣಜ್ಞಾನ- । ಗಿರಿಯನುರುಹಲು ನಿರತ ।
ಗುರುಸೇವೆಯಿಂದೊದಗಿಬಹ ವಿದ್ಯೆ ಕುಲಿಶ ॥
ಗುರುವರನು ದೀಪದೊಲು । ಕರಗುವುದೆ ತೇಜವದು ।
ಗುರುವಿಂಗೆ ಶರಣಾಗದಿರೆ ಮುಕ್ತಿಯಿರದು ॥ ೧೦ ॥
ಪೇಳಿದರೆ ನೀತಿಯನು । ಕೇಳಿ ಪಾಲಿಪರಾರು ।
ಭೂಲೋಕದಲಿ ಸಕಲರತಿಬುದ್ಧಿಯವರು ॥
ಬಾಳಿನನುಭವವೊಂದೆ । ಮೇಲಾದುದೆಲ್ಲದಕು ।
ಕಾಲ ಕಾಯುವುದೊಳಿತು ದೃಷ್ಟಾಂತಕಾಗಿ ॥ ೧೧ ॥

॥ ಭೈರವಿ ಝಂಪೆ ॥

ಎನುತ ಸುಮನಸವಂದ್ಯ ।
ಮನದೊಳಾಲೋಚಿಸುತ ॥
ವಿನಯದಿಂ ಧರ್ಮಸಭೆ- ।
ಯನು ವಿಸರ್ಜಿಸಲು ॥ ೧೨ ॥

॥ ಕೇದಾರಗೌಳ ಅಷ್ಟ ॥

ಗುರುಪೌತ್ರ ಭರದ್ವಾಜ- । ತರಳನಾ ಯವಕ್ರೀತ ।
ಗುರಿಯಿಲ್ಲದಿಹ ಸಾಹಸಿ ॥
ಧರೆಯ ವಿಪ್ರರು ಪಾದ । ಕೆರಗದೆ ದೂಷಿಸೆ ।
ಮರುಗಿದನುರೆ ಯೋಚಿಸಿ ॥ ೧೩ ॥
ತಂದೆಯ ಸಖ ರೈಭ್ಯ । ನಿಂದೆಮ್ಮ ಕೀರ್ತಿಗೆ ।
ಕುಂದಾಗುತಿದೆ ಜಗದಿ ॥
ನಿಂದಿಸುತೆನ್ನ ಜ್ಞಾ- । ನಾಂಧನೆನ್ನುತ ಮುನಿ- ।
ನಂದನರಿರೆ ಮುದದಿ ॥ ೧೪ ॥
ಜನಕಗಾದಪಮಾನ । ವೆನಗಾದ ಮೋಸವ ।
ನೆನಿತು ಸೈರಿಸಿ ಬಾಳಲಿ ॥
ಘನತಪದಿಂ ವೇದ- । ವನು ತಿಳಿದೆಲ್ಲರ ।
ಮಣಿಸುವೆ ಪಂಥದಲಿ ॥ ೧೫ ॥

॥ ಕೇದಾರಗೌಳ ಝಂಪೆ ॥

ಎಂದು ನಿಶ್ಚಯಗೈಯುತ । ಯವಕ್ರೀತ ।
ಬಂದ ಸುರಸರಸಿಯತ್ತ ॥
ಚೆಂದದಿಂ ಶಕ್ರನನ್ನು । ಮಂತ್ರಬಲ ।
ದಿಂದ ಬರಿಸಲು ಕುಳಿತನು ॥ ೧೬ ॥
ಯತಿಸುತನು ತಪದೊಳಿರಲು । ಧರಣಿಯಲಿ ।
ಗತಿಸಿದವು ವತ್ಸರಗಳು ॥
ಶತಕ್ರತುವು ವರ ಕೊಡದಿರೆ । ಮುನಿಯುತ್ತ ।
ಲತಿಕಠಿನ ವ್ರತ ಪಿಡಿದಿರೆ ॥ ೧೭ ॥

॥ ಕಾಂಭೋದಿ ಝಂಪೆ ॥

ಮುನಿಸುತನ ತಪವು ಮೇ- । ಲಣ ಲೋಕದವರ ತ- ।
ಲ್ಲಣಗೊಳಿಸುವಷ್ಟು ಬಲವಾಗೆ ॥
ಅನಿಮಿಷಾರ್ಚಿತ ತನ್ನ । ಮನದಿ ಗೊಂದಲ ಹೊಂದಿ ।
ತನುಸಹಿತ ದರುಶನವನಿತ್ತ ॥ ೧೮ ॥

ತ್ರಿದಶವಂದಿತ ಪದ್ಮ- । ಪದವ ಕಾಣುತಲಾತ ।
ವಿಧವಿಧದಿ ನುತಿಗೈದು ಮಣಿಯೆ ॥
ಮುದದಿಂದಲವನ ನೆಗ- । ಹಿದ ಮಘವ ಕಾರುಣ್ಯ- ।
ಸುಧೆ ನೀಡಿ ಮಾತಾಡಿಸಿದನು ॥ ೧೯ ॥

॥ ಮಧುಮಾಧವಿ ಏಕ ॥
ಏನಯ್ಯ ಮುನಿಸೂನು ಯಾಕಿಂಥ ತಪವು ।
ಕ್ಷೋಣಿ ಸೈರಿಸದು ತಾಪದೊಳೇನು ಫಲವು ॥
ಮಾನಸವಾಂಛೆಯನೆನ್ನೊಳು ಪೇಳು ।
ಸಾನುರಾಗದೊಳೀವೆ ಪಡೆದು ನೀ ಬಾಳು ॥ ೨೦ ॥
ಇಳಿದು ಬಂದೆಯ ದೇವ ದೃಢಭಕ್ತಿಗೊಲಿದು ।
ತಿಳುಹುವೆ ತಪಕೆ ಕಾರಣವಿರ್ಪುದೊಂದು ॥
ಇಳೆಯ ವಿಪ್ರರು ತಿಳಿಯದ ವೇದಗಳನು ।
ಸುಲಭದಿಂದಾರ್ಜಿಸಲಿಂತು ಗೈದಿಹೆನು ॥ ೨೧ ॥

॥ ತುಜಾವಂತು ಝುಂಪೆ ॥ ಮಧ್ಯಮಾವತಿ ಏಕ ॥ (ಸಮೀಕೃತ)
ತರಳ ನಿನ್ನಯ ವಾಂಛೆ । ಸರಿಯಲ್ಲ ಫಲವಿಲ್ಲ ।
ಗುರುಸೇವೆಯಿಂದಷ್ಟೆ ವೇದ ಸಿದ್ಧಿಪುದು ॥
ಬರಿದೆ ಮತ್ತೇಕೆ ನ- । ಶ್ವರದೇಹಕೀ ಶಿಕ್ಷೆ ।
ನರಜನ್ಮ ಪಿರಿದು ಯೋಚಿಸು ಬಾಳು ಕೆಡದು ॥ ೨೨ ॥
ಪೇಳಿದಂತೆಸಗಲ್ಕೆ । ಕಾಲ ಸಾಸಿರ ಬೇಕು ।
ಭೂಲೋಕವಿದು ಮೃತ್ಯುಕೂಪ ನಾ ಬಲ್ಲೆ ॥
ಕೇಳಿ ಕಲ್ತುದಕಿಂತ । ಮೇಲಾದುದೀಮಾರ್ಗ ।
ಪಾಲಿಸೆನ್ನಾಸೆ ಪಿಂತಿರುಗಲಾನೊಲ್ಲೆ ॥ ೨೩ ॥

॥ ಮಧುಮಾಧವಿ ತ್ರಿವುಡೆ ॥
ಹರಿ ಮುನಿಯೆ ಹರ ಪೊರೆವನೀರ್ವರು ।
ಕೆರಳಿದರೆ ಗುರು ಕಾವನೆಲ್ಲರ ॥
ನಿರತ ಗುರುಪದ ಸೇವೆಗೈಯುತ- ।
ಲರಿಯೆ ಶುಭಫಲ ದೊರೆವುದು ॥ ೨೪ ॥
ಶುದ್ಧಮಾನಸದಿಂದ ಶಿಷ್ಯರ ।
ತಿದ್ದಿ ಬುದ್ಧಿಯ ಕಲಿಸುವನು ಗುರು ॥
ಬಿದ್ದವರ ಮೇಲೆತ್ತಿ ಸಲಹುತ- ।
ಲಿದ್ದುದೆಲ್ಲವನೀವನು ॥ ೨೫ ॥

ತಾಳಿದಾತನು ಬಾಳುವನು ದಿಟ ।
ಹಾಳು ಮಾಡುವುದೇಕೆ ಜೀವನ ॥
ಬಾಲ ನಿನ್ನಭಿಲಾಷೆ ಫಲಿಸದು ।
ಕಾಲ ಕಳೆಯುವುದೇತಕೆ ॥ ೨೬ ॥

॥ **ಘಂಟಾರವ ಅಷ್ಟ** ॥ **ದೇಶಿ ಅಷ್ಟ** ॥
ಆಗದಾಗದು ಕಾಮಿತ ತೀರದು ।
ಬಾಗುವೆನು ತಪಫಲವನೀಗಲೆ ।
ಭೋಗಿಸಲು ಕೃಪೆದೋರ್ವುದು ॥ ೨೭ ॥

॥ **ಭಾಮಿನಿ** ॥
ಇನಿತು ಹಠ ಸಾಧಿಸುತ ನಿಂದಿಹ ।
ಮುನಿಕುಮಾರನನೊಲಿಸಲಾಗದೆ ।
ದನುಜಕುಲರಿಪು ವರವನೀಯದೆ ತೊರೆದು ಮರೆಯಾಗೆ ॥
ಮುನಿದು ಪದ್ಮಾಸನವ ಬಲಿಯುತ ।
ಘನತಪದ ಸಂಕಲ್ಪದಿಂದನು– ।
ದಿನವು ನಿದ್ರಾಹಾರವರ್ಜಿಸಿ ಮುನಿಜ ಕುಳ್ಳಿರಲು ॥ ೨೮ ॥

॥ **ಯಮುನಾಕಲ್ಯಾಣಿ ತ್ರಿವುಡೆ** ॥
ಮೇಘವಾಹನ ವೃದ್ಧ ಭೂಸುರ ।
ನಾಗಿ ಭೂಮಿಗೆ ಬಂದನು ॥
ರೋಗಪೀಡಿತರಂತೆ ನಟಿಸುತ ।
ಸಾಗಿ ನದಿಯೆಡೆ ನಿಂದನು ॥ ೨೯ ॥

॥ **ಪಂತುವರಾಳಿ ಅಷ್ಟ** ॥
ಮುನಿಸೂನು ಯವಕ್ರೀತನಿಗೆ ನಾನು । ಸತ್ಯ ।
ಮನಗಾಣಿಸಲು ತೋರ್ಪೆ ದೃಷ್ಟಾಂತವೊಂದನು ॥
ಎನುತ ತನ್ನಯ ಬೊಗಸೆಯೊಳಾಗ । ಮರಳ ।
ಕಣಗಳ ತುಂಬುತಲೆಸೆಯುತಲಿರೆ ಬೇಗ ॥ ೩೦ ॥
ದೂರದಿಂದಿದನೆಲ್ಲ ಕಾಣುತ್ತ । ಯವಕ್ರಿ ।
ಭಾರಿ ಚೋದ್ಯವ ತಾಳಿ ತಪದಿಂದಲೇಳುತ್ತ ॥
ಸಾರಿದ ವಿಪ್ರನಿರ್ದೆಡೆಗಾಗಿ । ಕಂಡು ।
ಕಾರಣ ಕೇಳಿದ ಕೌತುಕದಿಂ ಪೋಗಿ ॥ ೩೧ ॥

॥ **ಸುರುಟಿ ಆದಿ** ॥
ವೃದ್ಧನೆ ತುಸು ತಾಳು । ಕಾರ್ಯದ ।
ಉದ್ದೇಶವ ಪೇಳು ॥
ಸಿದ್ಧತೆ ಯಾವುದಕೆ । ನಿನ್ನಯ ।
ಬದ್ಧತೆಯೇತಕ್ಕೆ ॥ ೩೨ ॥

॥ **ಕಾಂಭೋದಿ ಅಷ್ಟ** ॥
ಶರಧಿಗೆ ಮರಳನು ಸುರಿದು । ಸಂ ।
ಚರಿಸುವೆ ಸೇತುವೆ ಬಲಿದು ॥
ಸುರನದಿಯನು ದಾಟ- । ಲಿರುವ ಕಷ್ಟವನಿನ್ನು ।
ಪರಿಹಾರ ಮಾಡಲು । ವಿರಚಿಸುತಿಹೆನಿಂತು ॥ ೩೩ ॥

॥ **ಪುನ್ನಾಗವರಾಳಿ ಮಟ್ಟೆ** ॥
ನಗೆಯು ಬರುತಿದೆ । ಎನಗೆ ।
ನಗೆಯು ಬರುತಿದೆ ॥ ಪ ॥
ಜಗದೊಳಿಂಥ ಮೂರ್ಖರಿರುವ ।
ಬಗೆಯ ನೆನೆದು ನಗೆಯು ಬಹುದು ॥ ಅ.ಪ ॥
ಕರದ ಮರಳು ಸೇತುವಹುದೆ ।
ಮೆರೆವ ಶರಧಿ ಬಂಧಿಯಹುದೆ ।
ಧರೆಯೊಳಿಂತು ಸಾಧ್ಯವಾಪುದೆ । ನಿಷ್ಫಲವು ಕಾರ್ಯ ॥ ೩೪ ॥

॥ **ಸುರುಟಿ ಏಕ** ॥
ಛಲ ಬಿಡು ಬಡವಿಪ್ರ । ಯತ್ನವು ।
ಫಲಿಸದು ನಡೆ ಕ್ಷಿಪ್ರ ॥
ನಿಲುವುದೆ ಮರಳೊಳು । ಬಲಿಯುವ ಸೇತುವೆ ।
ಜಲದಾರ್ಭಟವನು । ತಿಳಿಯೆಯ ಮರೆತೆಯ ॥ ೩೫ ॥
ಭೂಸುರ ವ್ಯರ್ಥವಿದು । ಕಳೆದರು ।
ಸಾಸಿರ ವರುಷವದು ॥
ಆಸೆಯ ತೊರೆದು ನಿ- । ವಾಸವ ಸೇರೈ ।
ವಾಸವ ತಪವೆನ- । ಗೀ ಸಮಯದಿ ಗುರಿ ॥ ೩೬ ॥

॥ **ಆಹೇರಿ ಝಂಪೆ** ॥
ನಿನ್ನ ತಪದಿಂ ವೇದವಿದ್ಯೆಗಳು ಸಿದ್ಧಿಸಲು ।
ಎನ್ನ ಕಾರ್ಯವು ವ್ಯರ್ಥವೇಕೆ ಪೇಳು ॥
ಇನ್ನು ನಮ್ಮೊಳು ಭೇದವಿಲ್ಲ ವಾದವು ಸಲ್ಲ ।
ಮುನ್ನ ನೀ ಛಲಬಿಡಲು ಬಿಡುವೆನೆಲ್ಲ ॥ ೩೭ ॥

॥ ದ್ವಿಜಾವಂತಿ ಅಷ್ಟ ॥

ಧರಣಿದೇವನ ಮಾತ । ಸರಿಯಾಗಿ ಗ್ರಹಿಸಲು ।
ಸುರಪಾಲನಿವನೆಂಬುದರಿವಾಗಿ ॥
ಪರಿಪರಿ ನುತಿಸುತ । ವರವ ನೀಡೆನ್ನುತ ।
ಚರಣಕೆ ಮಣಿದನು ಶಿರಬಾಗಿ ॥ ೩೮ ॥

॥ ತೋಡಿ ರೂಪಕ ॥

ಅನಿಮಿಷೇಂದ್ರ ಸುಗುಣ ಸಾಂದ್ರನೆ । ಜ್ಞಾನವನು ಪಡೆಯೆ ।
ಎನಗೆ ವರವ ನೀಡು ದೇವನೆ ॥ ಪ ॥
ಘನತಪದೊಳು ಲೀನನಾಗಿ ।
ತನುವಿನಿರವ ಮರೆಯುತಿರುವೆ ।
ನಿನಗೆ ದಯೆಯು ಬಾರದಾಯ್ತೆ ।
ಮುನಿಯದಖಿಲವಿದ್ಯೆ ನೀಡು ॥ ೩೯ ॥

॥ ತುಜಾವಂತು ಝಂಪೆ ॥

ಬೇಡಿರುವ ವಿದ್ಯೆಯನು । ನೀಡದಿರೆ ಸುರಪಾಲ ।
ಗಾಢತಪ ಗೈವ ಸಂಕಲ್ಪದಿಂ ಮುನಿಯು ॥
ಆಡದೆಲೆ ಕುಳಿತಿರಲು । ನೋಡಿ ನಿರ್ಜರಪತಿಯು ।
ಕೇಡು ತಪ್ಪಿಸಲು ಬಳಿ ಬಂದು ತಾನೆಂದ ॥ ೪೦ ॥

॥ ಕಾಪಿ ಅಷ್ಟ ॥

ಯವಕ್ರೀತ ಕೇಳಿತ್ತ ನೀನು । ಇನ್ನು ।
ಭುವಿಯ ಪಂಡಿತನಾಪೆ ವರವನೀಯುವೆನು ॥
ತವಪಿತ ಸುಜ್ಞಾನಿಯಹನು । ಗುರುವು ।
ತವಸಿಯ ಕೆಣಕದೆ ಮೆರೆಸು ಜ್ಞಾನವನು ॥ ೪೧ ॥

॥ ಪಂತುವರಾಳಿ ರೂಪಕ ॥

ಧನ್ಯನಾದೆ ಕರುಣಸಾಗರ । ವರವನಿತ್ತು ।
ಎನ್ನ ಹರಣ ಪೊರೆದೆ ಶುಭಕರ ॥ ಪ ॥
ನಿನ್ನ ಕಾಣಲೆಂದು ಬಂದು ।
ಅನ್ನ ಪಾನ ತೊರೆದು ನಿರತ ।
ಮುನ್ನ ಧ್ಯಾನಿಸಲ್ಕೆ ಬಯಕೆ- ।
ಯನ್ನು ತೀರಿಸಿದೆಯ ದೇವ ॥ ೪೨ ॥

॥ **ಸಾಂಗತ್ಯ** ॥
ಎನುತ ಪಾದಾಬ್ಜಕೆ । ಮಣಿದಿಹನನ್ನೆತ್ತಿ ।
ಅನಿಮಿಷಾರ್ಚಿತ ಗಮಿಸಿದನು ॥
ಮನದಿ ಸಂತಸವಾಂತು । ಮುನಿಸೂನು ಶೀಘ್ರದಿ ।
ಜನಕನಿರ್ದೆಡೆ ಚಿತ್ತೈಸಿದನು ॥ ೪೩ ॥

॥ **ತುಜಾವಂತು ಝಂಪೆ** ॥
ಗುರುಪುತ್ರನಂಗೀರ- । ಸರ ಪೌತ್ರನಾಗಿರುವ ।
ವರಮುನಿ ಭರದ್ವಾಜ ಸುರನದೀ ತಟದಿ ॥
ಅರಿತ ವಿದ್ಯೆಯನೆಲ್ಲ । ವರುಹುತಲಿ ಶಿಷ್ಯರಿಗೆ ।
ಧರೆಯ ಕಲ್ಯಾಣಕಾಶ್ರಮ ವಿರಚಿಸಿರಲು ॥ ೪೪ ॥
ಜಾತನಿಹನೋರ್ವ ಯವ- । ಕ್ರೀತ ನಾಮಕ ಚೆಲುವ ।
ಆತ ಹಠವಾದಿ ಛಲಗಾರ ಮುಂಗೋಪಿ ॥
ಮಾತ ಕೇಳನು ಗುರುಗ- । ಳೇತಕ್ಕೆ ಬೇಕೆಂಬ ।
ನೀತಿ ಪೇಳಲು ಸಿಕ್ಕದೆತ್ತಲೋ ನಡೆವ ॥ ೪೫ ॥
ಎನ್ನ ಸಖ ರೈಭ್ಯಮುನಿ । ತನ್ನ ಸುತರೊಡನೆ ಜಗ- ।
ದುನ್ನತಿಗೆ ಘನತಪವ ಗೈಯುತಿಹ ಮಹಿಮ ॥
ಚಿಣ್ಣರೀರ್ವರು ತಂದೆ- । ಯನ್ನೆ ಪೋಲುವರೆಂದು ।
ಬಣ್ಣಿಸಲು ಬಲುತೋಷವಾಯ್ತು ಪಿತನಷ್ಟೆ ॥ ೪೬ ॥

॥ **ದ್ವಿಪದಿ** ॥
ಹೀಗೆನುವ ಕಾಲದಲಿ ಬಂದು ಯವಕ್ರೀತ ।
ರಾಗದಿಂ ಪಿತನಪದಕೆರಗುತ್ತ ನಿಂತ ॥ ೪೭ ॥

॥ **ಮಧ್ಯಮಾವತಿ ತ್ರಿವುಡೆ** ॥
ಬಾಲ ನಿನ್ನನು ಕಾಣದೆಲೆ ಬಹು- ।
ಕಾಲವಾದುದು ಬಂದೆಯ ॥
ಲೀಲೆಯಲಿ ನೀ ಪೋದುದೆಲ್ಲಿಗೆ ।
ಕೇಳುವಾತುರ ವಾರ್ತೆಯ । ಪೇಳು ಬೇಗ ॥ ೪೮ ॥

॥ **ಪೂರ್ವಿ ಅಷ್ಟ** ॥
ಸಾಧಿಸಿದೆನು ತಪದ ಬಲದಿ ವೇದವಿದ್ಯೆಯ । ಶಾಸ್ತ್ರ ।
ವೋದಿದವರು ಪಾದಕೆರಗಲಾದುದ್ಯೆ ಜಯ ॥
ಭೇದವೆಣಿಸಿದವರೆ ಮುಂದಕಾಧರಿಸುವರು । ಎನ್ನ ।
ಮೇದಿನಿಯಲಿ ಪೋಲ್ವರಾರು ಮೋದಗೊಳಿಪರು ॥ ೪೯ ॥

॥ **ಶಂಕರಾಭರಣ ರೂಪಕ** ॥
ಸರಿಯೆ ತರಳ ಗುರುವು ನುಡಿಯ- ।
ದರಿವು ಪಡೆದುದು ॥
ವರದ ಬಲದಿ ಗರುವವಡರಿ ।
ಮರಣ ಬರುವುದು ॥ ೫೦ ॥
ಅರಿತ ಹಿರಿಯರೊರೆದ ಮಾತು ।
ನಿರತ ನಿಗಮವು ॥
ಪುರುಷಯತುನಕಧಿಕ ವಿಧಿಯು ।
ಬರೆದ ಬರಹವು ॥ ೫೧ ॥

॥ **ಕಾಪಿ ಏಕ – ೨** ॥
ಸುರರು ಪೇಳಿದ ಚರಿತೆಯನು ನಾ- ।
ನೊರೆವೆ ಮಮಸೂನು ॥ ಭುವಿಯಲಿ ।
ಸರಿದ ಕಾಲದಿ ಮುನಿಪ 'ಬಾಲಧಿ' ।
ಧರಿಸಿ ವಾಂಛೆಯನು ॥ ನಿಷ್ಠೆಯೊ ।
ಉರುತರದ ತಪಗೈದು ಗೀರ್ವಾ- ।
ಣರನು ಬರಿಸಿದನು ॥ ಶಾಶ್ವತ ।
ಮರಣವಿರಹಿತ ಸುತನ ಹೊಂದಲು ।
ವರವ ಬೇಡಿದನು ॥ ಕೊಡದಿರೆ ।
ಮರಳಿ ಕೇಳಿದ ಗಿರಿಗಳಿರುವರೆ ।
ಗಿರುವ ಕಂದನನು ॥
ಕರುಣಿಸಿದನಮರೇಂದ್ರನಂತೆಯೆ ।
ಮರುಗಳಿಗೆ 'ಮೇಧಾವಿ' ನಾಮದಿ ।
ತರಳನುದಿಸಿದ ವಿದ್ಯೆ ಸಿದ್ಧಿಸೆ ।
ಗರುವವೇರಿತು ಬುದ್ಧಿ ನಶಿಸಿತು ॥ ೫೨ ॥

॥ **ಮತ್ತಕೋಕಿಲ ವೃತ್ತ** ॥
ಧರಣಿದೇವರ ಹುಡುಕಿ ತುಡುಕಿದ ।
ದುರುಳತನದಿಂದಾತನು ॥
ಪಿರಿಯ ತಪದೊಳಗಿರುವ 'ಧನುಷಾ- ।
ಕ್ಷ'ರನು ಕಾಡಲು ಮುನಿಪನು ॥
ಉರಿವ ಲೋಚನ ತೆರೆದು ಗಿರಿಗಳ- ।
ನುರುಹೆ ಬಾಲಕನಳಿದನು ॥
ಬರೆದ ಬರಹಕೆ ಕಿರಿದು ವರಬಲ ।
ತರಳ ನೀ ತಿಳಿ ನಿಜವನು ॥ ೫೩ ॥

॥ **ಪಾಡಿಕುರಂಗ ಝುಂಪೆ** ॥ **ಕಾಪಿ ಅಷ್ಟ** ॥ **(ಸಮೀಕೃತ)**
ಪಡೆದ ಸಿದ್ಧಿಗೆ ಹೆಮ್ಮೆ ಪಡದೆ । ನೀವು ।
ಕೆಡುಕೇಕೆ ಪೇಳ್ವಿರೀ ವತ್ಸನೊಳ್ ಬರಿದೆ ॥
ನಡೆತಪ್ಪೆ ಬರಿದೇಕೆ ಚಿಂತೆ । ಮರಣ ।
ಕೆಡೆಮಾಡಿಕೊಡದಂತೆ ಬಾಳ್ವೆ ನಿಮ್ಮಂತೆ ॥ ೫೪ ॥

॥ **ರೇಗುಪ್ತಿ ಅಷ್ಟ** ॥
ಕಂದ ಕೇಳಿತ್ತ ನೀನು । ನೀಡುವೆ ನಿನ- ।
ಗಿಂದು ಸೂಚನೆಯೊಂದನು ॥ ಪ ॥
ತಂದೆ ನಾನಾದುದರಿಂದ ನಿನ್ನೇಳ್ಗೆಯ ।
ಅಂದವ ಬಗೆದು ಮುಂದಿನ ಮಾರ್ಗ ತೋರುವೆ ॥ ಅ.ಪ ॥
ಪರಮಪ್ರತಾಪಿ ಕೋಪಿಷ್ಠನು ರೈಭ್ಯನು ।
ಅರಿತಿಹ ನಿಗ್ರಹಾನುಗ್ರಹವ ॥
ಹಿರಿಯ ಪರಾವಸು ಕಿರಿಯನರ್ವಾವಸು ।
ತರಳರು ಪಂಡಿತರಿಹರು ಪ್ರಚಂಡರು ।
ಮರೆಯ ಬೇಡೀಮಾತನು । ಆಶ್ರಮದತ್ತ ।
ತೆರಳಲು ಮುನಿಯುವನು । ನಿನ್ನಂತ್ಯಕೆ ।
ಕರೆದಂತೆ ಮೃತ್ಯುವನು । ತಿಳಿ ನಿಜವನು ।
ವರದಿಂದ ಕೊಬ್ಬದೆ ಬಾಗಿ ಬಾಳುವುದಿನ್ನು ॥ ೫೫ ॥

॥ **ಭಾಮಿನಿ** ॥
ತಂದೆಯಾಡಿದ ನುಡಿಗೆ ಸಹಮತ ।
ದಿಂದಲೊಪ್ಪುತ ನಂಬುಗೆಯು ಬರು- ।
ವಂದದಲಿ ನಯ ವಿನಯ ತೋರಲು ಹರಸಿ ಮುನಿ ಚರಿಸೆ ॥
ಬಂದುದನು ನಾ ನೋಡಿಕೊಂಬೆನು ।
ಮುಂದಿನದನಿಂದೇಕೆ ಚಿಂತಿಸ- ।
ಲೆಂದು ವರಬಲಮತ್ತನಾಗಿಹ ತರಳ ಮುನ್ನಡೆದ ॥ ೫೬ ॥

॥ **ಶಂಕರಾಭರಣ ತ್ರಿವುಡೆ** ॥
ತವಸಿ ರೈಭ್ಯನ ಸುತನ ವಲ್ಲಭೆ ।
ನವವಿವಾಹಿತೆ ಶೃಂಖಲೆ ॥
ಭುವಿಯ ಪುಣ್ಯಾಶ್ರಮದ ಸುಖದಲಿ । ವಿವಶಗೊಳುತ ॥ ೫೭ ॥
ಪರಮಸುಂದರಿ ಮಧುರಭಾಷಿಣಿ ।
ಹರಿಣಲೋಚನೆ ಕೋಮಲೆ ॥
ಹರುಷದಿಂ ಪಾಡುತಲಿ ವನದೊಳು । ಚರಿಸುತಿರಲು ॥ ೫೮ ॥

॥ **ನಾಟಿ ಅಷ್ಟ** ॥

ಈ ನವೀನ ವಸುಂಧರೆಯು ಮಮ– ।
ಮಾನಸವನುಲ್ಲಾಸಗೊಳಿಪುದು ।
ಧ್ಯಾನಮಂದಿರವಹುದು ಭಕುತರಿಗೆ ॥
ಸಾನುರಾಗದೊಳೆಸೆವ ಬೀಡಿದು ।
ಪ್ರಾಣಿಸಂಕುಲಕಿಲ್ಲ ವೈರವು ।
ನಾನೆ ಧನ್ಯಳು ಜಗದ ಸ್ತ್ರೀಯರೊಳು ॥ ೫೯ ॥

॥ **ಶಹನಾ ಏಕ** ॥

ವರದಿಂದ ಕೊಬ್ಬಿ ಸಂ– । ಚರಿಸುತ್ತ ಯವಕ್ರೀತ ।
ಪರಮ ಪಂಡಿತರನ್ನು ಜರೆಯುತ್ತಲಿ ॥
ಬರಲು ರೈಭ್ಯರ ಪುಣ್ಯ । ಧರೆಯತ್ತ ಮದಮತ್ತ ।
ತರುಣಿ ಶೃಂಖಲೆಯನ್ನು ಕಂಡನಲ್ಲಿ ॥ ೬೦ ॥

॥ **ಅಠಾಣ ಅಷ್ಟ** ॥

ಅಮಮ ಮೋಹಾಕಾರೆಯೀ ನಾರಿ । ವೈಯಾರಿ ।
ಕುಮುದದಳಾಂಬಕಿ ಶೃಂಗಾರಿ ॥ ಪ ॥
ಸುಮನಸ ಸತಿಯರ ।
ಕಮನೀಯ ರೂಪವು ।
ಸಮನಲ್ಲವೀಕೆಯ ।
ಅಮಿತ ಸೌಂದರ್ಯಕೆ ॥ ೬೧ ॥
ಸೋತೆನೀಕೆಯ ಮೈಯ್ಯ ಮಾಟಕೆ । ನೋಟಕೆ ।
ಮಾತಾಡಿಸದೆ ಪೋಗೆ ಪಿಂದಕೆ ॥
ಈ ತನು ಕಾಂತಿಗೆ ।
ನಾಥನಾನಾದರೆ ।
ಭೂತಳದಲಿ ಬೇರೆ ।
ಯೇತಕೆ ಭೋಗವು ॥ ೬೨ ॥

॥ **ಮಾರವಿ ಏಕ** ॥

ನಾರಿಯರೊಳು ಶೃಂ– । ಗಾರಿಯು ಮಾರನ ।
ಕೂರಲಗಿಗೆ ಸಮಳು ॥
ಸಾರಸಮುಖಿ ವೈ– । ಯಾರಿಯು ಮೋಹಾ ।
ಕಾರೆಯು ದಿಟವಿವಳು ॥ ೬೩ ॥

॥ **ಸಾರಂಗ ಅಷ್ಟ** ॥
ನಿಲ್ಲು ನಿಲ್ಲೆಲೆ ಶೃಂಖಲೆ । ನವಯೌವನೆ ।
ಹುಲ್ಲೆಗಣ್ಗಳ ಕೋಮಲೆ ॥ ಪ ॥
ಅಂಗಜ ತಾಪವನು । ಮೋಹಾಂಗಿಯೆ ।
ಹಿಂಗಿಸು ಬಾರೆ ನೀನು ॥
ಅಂಗನಾಮಣಿ ನಾ ನಿ- ।
ನ್ನಂಗಸಂಗಕೆ ಬಂದೆ ॥
ತುಂಗಾಲಿಂಗನದಿಂದ ।
ಶೃಂಗಾರ ಸುಖ ನೀಡು ॥ ೬೪ ॥

॥ **ಬೇಗಡೆ ರೂಪಕ** ॥
ಪರರ ಸತಿಯ ಕಾಮಿಸುವುದು ।
ಸರಿಯೆ ನಿನಗೆ ಮುನಿಪನೆ ॥
ವರವನಾಂತು ಮರೆಯ ಬೇಡ ।
ಮರಣ ಬಹುದು ಮೂರ್ಖನೆ ॥ ೬೫ ॥

॥ **ಕಾಂಭೋಜ ಏಕ** ॥
ಬಂದುದನ್ನು ನೋಡಿಕೊಂಬೆ ।
ಸುಂದರಾಂಗಿ ಬಾರೆ ॥
ಇಂದು ನಿನ್ನ ಸುಖಿಸೆ ಮರಣ ।
ಹೊಂದಲಳುಕೆ ನೀರೆ ॥ ೬೬ ॥

॥ **ಆರ್ಯಸವಾಯ್ ಏಕ** ॥
ಅಂಗಜನರಗಿಣಿ । ಶೃಂಗಾರದ ಖಣಿ ।
ತುಂಗಾಲಿಂಗನ ಕೊಡು ರಮಣಿ ॥
ಸಂಗಸುಖದಿ ಮಿಗೆ । ಹಿಂಗಿಸು ವಿರಹವ ।
ಅಂಗನೆ ನೀ ಸುಮ ನಾ ದ್ಯುಮಣಿ ॥ ೬೭ ॥

॥ **ನೀಲಾಂಬರಿ ತ್ರಿವುಡೆ (ಪ್ರಭೇದ)**
ಪರಮ ಕೋಪಿಷ್ಠರು । ವರಯತಿ ರೈಭ್ಯರು ।
ತೆರಳು ಕಾಡದಿರು ॥
ಅರಿತರಾದರೆ ನಿನ್ನ । ದುರುಳಕೃತ್ಯವನೆಲ್ಲ ।
ಕೆರಳಿ ಕೊಲ್ಲುವರು ॥ ೬೮ ॥

॥ **ಭೈರವಿ ಅಷ್ಟ** ॥
ತರುಣಿ ಬಾಯ್ಮುಚ್ಚು ನೀನು । ಸುರಪತಿಯಿಂದ ।
ವರಹೊಂದಿ ಬಂದಿಹೆನು ॥
ವರಿಸಿದರೊಳಿತೀವೆ ।
ಬರದಿರೆ ಶಾಪದ ।
ಪರಿಣಾಮ ಕೆಡುಕೆಂಬೆನು ॥ ೬೯ ॥

॥ **ಭಾಮಿನಿ** ॥
ಮುನಿಸುತನು ಮುನಿದೆಂದ ವಚನವ ।
ನೆನೆದು ಮಾನಿನಿ ಶಾಪ ಭೀತಿಗೆ ।
ಮನದಿ ಬೆಚ್ಚುತ ದಾರಿ ಕಾಣದೆ ನೊಂದು ನಿಂದಿರಲು ॥
ಅನುಮತಿಯ ನೀಡುವುದೆ ಸರಿಯೆನು- ।
ತನಿತರೊಳು ತನುವೀಯಲಾತನು ।
ವನಿತೆಯನು ಭೋಗಿಸುತಲಗಲುತ ಪಿಂದೆ ಸಾಗಿದನು ॥ ೭೦ ॥

॥ **ಕೇದಾರಗೌಳ ಅಷ್ಟ** ॥
ಶೀಲಕೆಟ್ಟವಳಾಗಿ । ಬಾಳುವುದೆಂತಿನ್ನು ।
ಪೇಳುವುದಾರೊಡನೆ ॥
ಪಾಲಿಪ ಮುನಿಸೂನು । ಖೂಳಕೃತ್ಯದೊಳುಂಡ- ।
ಬಾಳೆಯಾಗಿಸಿ ಪೋದನೆ ॥ ೭೧ ॥

॥ **ದ್ವಿಪದಿ** ॥
ಎನುತ ಶೃಂಖಲೆ ನೊಂದು ಗೋಳಿಟ್ಟಳಾಗ ।
ವನದೊಳಾಕ್ರಂದನವು ಪಸರಿಸಿತು ಬೇಗ ॥ ೭೨ ॥

॥ **ತುಜಾವಂತು ಝಂಪೆ** ॥
ಗಾಧಿಜನು ಬ್ರಹ್ಮರ್ಷಿ- । ಯಾದಮೇಲುದಿಸಿರುವ ।
ಮೇಧಾವಿ ರೈಭ್ಯಮುನಿ ಶಿಷ್ಯರೊಡಗೂಡಿ ॥
ಬೋಧಿಸುತ ವಿದ್ಯೆಯನು । ಸಾಧಿಸುತ ಕ್ಷೇಮವನು ।
ಮೇದಿನಿಯ ಕಲ್ಯಾಣ ಬಯಸಿ ತಪವೆಸಗೆ ॥ ೭೩ ॥
ತನ್ನ ಸೊಸೆಯಾಶ್ರಮದಿ । ಕಣ್ಣೀರ ಸುರಿಸುತಿರೆ ।
ಹೆಣ್ಣಿನಳಲನು ತಿಳಿಯೆ ತಪವ ತೊರೆಯುತ್ತ ॥
ಮುನ್ನ ತಾ ದಿವ್ಯಾಕ್ಷಿ- । ಯನ್ನು ತೆರೆಯಲು ಮುನಿಯ- ।
ಚೆಣ್ಣನೆಸಗಿದ ಹೇಯ ಕೃತ್ಯದರಿವಾಗಿ ॥ ೭೪ ॥

॥ **ಮಾರವಿ ಏಕ** ॥

ಕ್ರೋಧಾಗ್ನಿಯು ಭುಗಿ– । ಲೆದ್ದುದು ಮುನಿಸುತ ।
ಗೈದುದ ಪರಿಕಿಸಲು ॥
ಆ ದುಷ್ಟನ ಮದ । ಭೇದಿಸಿ ತರಿಯಲು ।
ಸಾಧನ ಶೋಧಿಸಲು ॥ ೭೫ ॥
ಉರಿಯುವ ಬೆಂಕಿಗೆ । ಸುರಿಯುತಲಾಜ್ಯವ ।
ಕುರುಳನು ಹೋಮಿಸಲು ॥
ವಿರಚಿಸಿದಗ್ನಿಯೊ । ಳೆರಡಾಕೃತಿಗಳು ।
ಭರದಿಂದುದಯಿಸಲು ॥ ೭೬ ॥
ಒಂದಾಕೃತಿಯದು । ಹೊಂದುತ ಶೃಂಖಲೆ ।
ಯಂದವ ಹೆಣ್ಣಾಯ್ತು ॥
ನಿಂದನಸುರ ಮ– । ತ್ತೊಂದರೊಳಾಗ ವ– ।
ಸುಂಧರೆ ಬೆರಗಾಯ್ತು ॥ ೭೭ ॥

॥ **ಸೌರಾಷ್ಟ್ರ ತ್ರಿವುಡೆ** ॥

ಯಾತಕೆನ್ನನು ಸೃಷ್ಟಿಗೈದಿರಿ ।
ತಾತ ಪೇಳೆನಗೇನು ಕಾರ್ಯವು ॥
ಯಾತಕೀಪರಿ ಚಿಂತೆ ನುಡಿ ನಿ– । ರ್ಭೀತಿಯಿಂದ ॥ ೭೮ ॥
ಹೋಮದಿಂದುದ್ಭವಿಸಿ ಬಂದಿಹ ।
ಭೀಮಕಾಯನ ಮಾತ ಕೇಳುತ ॥
ಆ ಮುನೀಶನು ಹರಸಿ ಪೇಳ್ದನು । ಪ್ರೇಮದಿಂದ ॥ ೭೯ ॥

॥ **ಶಂಕರಾಭರಣ ಮಟ್ಟೆ** ॥

ಬಾರೊ ವೀರ ಮಮಕುಮಾರ ।
ಭೂರಿಬಲವನಾಂತ ಶೂರ ॥
ಕಾರಣವನು ಪೇಳ್ವೆ ಕಾರ್ಯ । ಭಾರ ನಿನ್ನದು ॥ ೮೦ ॥
ದುರುಳ ಮುನಿಯು ವರದಿ ಕೊಬ್ಬಿ ।
ತರಳನರಸಿಯನ್ನು ಕೆಡಿಸಿ ॥
ಮೆರೆಯುತಿಹನು ತೆರಳಿ ಭರದಿ । ತರಿದು ಬರುವುದು ॥ ೮೧ ॥
ತಾತ ಯಾತಕಿಂತು ಚಿಂತೆ ।
ಪಾತಕಿಯನು ಹುಡುಕಿ ಮೃತ್ಯು ॥
ಯಾತನೆಯನು ಕೊಟ್ಟು ಕೊಲುವೆ । ಮಾತು ಸತ್ಯವು ॥ ೮೨ ॥
ಸುಲಭವಲ್ಲ ಕೊಲುವ ಕಾರ್ಯ ।
ಬಲವು ಸಾಲದಿದಕೆ ಯುಕ್ತಿ– ॥
ಯೊಲವು ಬೆರೆತರಷ್ಟೆ ಸಾಧ್ಯ । ಗೆಲುವು ಸಾಧಿಸೆ ॥ ೮೩ ॥

॥ **ಬ್ರಹ್ಮ ಷಟ್ಪದ** ॥
ಪಿತನೆ ನಿನ್ನ ।
ಸುತೆಯು ನಾನು ।
ಸ್ಥಿತಿಯನರಿತು ಕೇಳುವೆ ॥
ಯತಿಯ ಕೊಲುವ ।
ಪಥವನರುಹು ।
ಮತಿಯನಿರಿಸಿ ಗೈಯುವೆ ॥ ೮೪ ॥

॥ **ಶಂಕರಾಭರಣ ಮಟ್ಟೆ** ॥ **ಭೋಗಾರ್ಧ ಷಟ್ಪದಿ** ॥ (ಸಮೀಕೃತ)
ಸಣ್ಣದಲ್ಲ ಹೆಣ್ಣಿನಾಸೆ ।
ಕನ್ನೆ ನೀನು ಮೋಹಗೊಳಿಸಿ ॥
ಪುಣ್ಯಜಲವ ಬರಿದುಗೊಳಿಪು- । ದನ್ನು ಸಾಧಿಸು ॥ ೮೫ ॥
ಜಲದ ಬಲವು ಪೂರ್ಣ ಕಳೆಯೆ ।
ಬಳಿಕ ಕುವರ ನೀನು ಪೋಗಿ ॥
ಕೊಲುವ ಕಾರ್ಯವೆಸಗು ನಿಮಗೆ । ಫಲವು ದೊರೆವುದು ॥ ೮೬ ॥

॥ **ಕಂದ** ॥
ಎನಲೀರ್ವರು ಪಿತನಿಂದ- ।
ಪ್ಪಣೆ ರಕ್ಷಣೆಯಂ ಪಡೆಯುತಲಾಶ್ರಮ ತೊರೆದರ್ ॥
ಮುನಿಯಿರ್ದೆಡೆಯಂ ಶೋಧಿಸ- ।
ಲನಿತರೊಳಾತಂ ತಪವನು ಗೈಯುತಲಿರ್ದಂ ॥ ೮೭ ॥

॥ **ಆರ್ಯಸವಾಯ್ ಏಕ** ॥
ಮಾಯಾಂಗನೆ ಮದನಾಂಗನ ಸೆಳೆಯಲು ।
ಪಾಯದಿ ನಾಟ್ಯವನಾಡಿದಳು ॥
ತೋಯಜಲೋಚನೆ ಶೃಂಗರಿಸುತ ಸವಿ- ।
ಗಾಯನ ರಸಸುಧೆ ನೀಡಿದಳು ॥ ೮೮ ॥

॥ **ಕಮಾಚು ಏಕ** ॥
ಕನ್ನೆಯ ಗಾಯನ । ಕಣ್ತೆರೆಸಿತು ತಪ- ।
ವಿನ್ನೇತಕೆ ಸುಖಸಕಲಂ ॥
ಮುನ್ನಿನ ರತಿಸುಖ- । ವನ್ನು ನಿರೀಕ್ಷಿಸಿ ।
ಬಣ್ಣಿಸಿದನು ಮತಿವಿಕಲಂ ॥ ೮೯ ॥

॥ **ಗೌಳಿ ಪಂತು ಏಕ** ॥

ಬಂದೆಯ ಚೆಲುವೆ ನೀನು । ಪಂಚಾಸ್ತ್ರದಿ ।
ನೊಂದು ನಾ ಬೆಂದಿಹೆನು ॥ ಪ ॥
ಸುಂದರಾಂಗಿ ಸುಪ್ರಭಾಂಗಿ ।
ನಿಂದುದೇನೆ ಬಾರೆ ಜಾಣೆ ।
ಇಂದುನಿಭಾನನೆ ।
ಹೊಂದಿಹೆ ಯಾತನೆ ।
ಚಂದದಿ ತೋಳಿನ ।
ಬಂಧನವೊದಗಿಸು ॥ ಅ.ಪ ॥
ಕಾಮನೆನ್ನ ತನುವ ನೋಡಿ ।
ಸಾಮದಿಂದ ಶರವ ಪೂಡಿ ।
ಭಾಮೆ ನಿನ್ನ ನೆನಪು ಮಾಡಿ ।
ಪ್ರೇಮಪಾಶವಿತ್ತ ಸೋತೆನು । ತನ್ನವರನೆಲ್ಲ ।
ಭೂಮಿಗಟ್ಟಿ ಕಾರ್ಯಗೈವನು । ಸಖನೆಣಿಕೆಯಂತೆ ।
ಸೋಮ ಶೀತಕರವನೀವನು । ವಿರಹಾಗ್ನಿ ತಾಳೆ ।
ಕೋಮಲಾಂಗಿ ಭೋಗಿಸೆನ್ನನು । ನಿನಗಾಗಿ ಸ್ವರ್ಗ- ।
ಧಾಮವನ್ನೆ ತರಲು ಪೋಪೆನು । ಮಾತನ್ನು ಮೀರೆನು ।
ಸಾಮರ್ಥ್ಯದಿ ಸು- । ತ್ರಾಮನ ಬರಿಸಿಹೆ ।
ಸಾಮಜಗಾಮಿನಿ । ಕೇಳೆಲೆ ।
ಕ್ಷೇಮದಿ ರಮಿಸಲು । ಬಾರೆಲೆ ।
ತಾಮಸಗೊಳ್ಳದೆ । ಸೇರೆಲೆ ।
ನೀ ಮನ ಮಾಡಲು ।
ನಾ ಮುದಗೊಂಬೆನು ।
ತಾಮರಸಾನನೆ ।
ಬಾ ಮದನಾಂಗನೆ ॥ ೯೦ ॥

॥ **ಭಾಮಿನಿ** ॥

ಇಂತು ಪರಿಪರಿ ಕಂತುಹತಿಯಿಂ- ।
ದಂತರಂಗದಿ ಕುಗ್ಗುತಲಿ ಮುನಿ ।
ಸಂತಸದಿ ಮಿಗೆ ಮಾಯೆಯರಿಯದೆ ಮೋಹಗೊಳ್ಳುತಿರೆ ॥
ದಂತಿಗಮನೆಯುಪಾಯದಿಂದಲ- ।
ನಂತಪುಣ್ಯಕಮಂಡಲವ ನೆನೆ- ।
ದಂತೆ ಸೆಳೆಯುತ ಮರೆಗೆ ಸರಿದಿರಲಸುರನಿದಿರಾಗಿ ॥ ೯೧ ॥

॥ ಸಾವೇರಿ ಮಟ್ಟೆ ॥
ಎಲವೊ ಖೂಳ ಮುನಿಯೆ ನಿಲ್ಲು ।
ತಿಳಿದೆ ತಡೆದಿಹೆ ॥
ಲಲನೆಯನ್ನು ಕೆಡಿಸಿದುದಕೆ ।
ಕೊಲಲು ಬಂದಿಹೆ । ಮೃತ್ಯು ।
ಬಲವ ತಾಳಿಹೆ ॥ ೯೨ ॥
ಯಾರೊ ನೀನು ದುರುಳ ಬರಿದೆ ।
ಭಾರಿ ಕೂಗುವೆ ॥
ಕಾರಣವನು ಕಾರ್ಯವರುಹಿ ।
ಸಾರು ಬಾಳುವೆ । ನಿನಗೆ ।
ಸಾರಿ ಪೇಳುವೆ ॥ ೯೩ ॥

॥ ಯಾಲಪದ ॥
ಜನಕನೆನಗೆ ರೈಭ್ಯ ಮುನಿಯು ।
ಜನಿಸಿ ಬಂದೆ ಹೋಮದಿಂದ ॥
ಅನಲಕಾಯನೆಂಬ ಪೆಸರಿದೆ । ಯಮನಾಗಿ ಬಂದೆ ।
ನಿನಗೆ ಮೃತ್ಯುಕಾಲ ಬಂದಿದೆ ॥ ೯೪ ॥
ಹುಚ್ಚರಂತೆ ಗಳಹ ಬೇಡ ।
ಮುಚ್ಚು ಬಾಯನೆಚ್ಚರಿಕೆಯು ॥
ನಿಚ್ಚ ತಪವನೆಸಗೆ ಶಕ್ರನು । ಮೆಚ್ಚುತ್ತ ಬಂದು ।
ಇಚ್ಛಿಸಿರುವ ವರವನಿತ್ತನು ॥ ೯೫ ॥

॥ ಭೈರವಿ ಏಕ ॥
ವರಬಲವರಿತಿಹೆ ನಾನು । ನೀ ।
ಮರಣವ ಗೆಲಿದಿಹೆಯೇನು ॥
ಪರಸತಿಯನು ಕೆಡಿಸಿದಕೆ । ಬಂ- ।
ದಿರುವೆನು ಶಿರವರಿವುದಕೆ ॥ ೯೬ ॥
ಮಾತೇತಕೆ ನಿನ್ನೊಡನೆ । ಈ ।
ಭೀತಿಗೆ ನಾ ಬೆಚ್ಚುವೆನೆ ॥
ಘಾತಿಸುವೆನು ನೋಡೆನುತ । ಉ- ।
ತ್ಪಾತವ ಸೃಜಿಸಿದನಾತ ॥ ೯೭ ॥
ಶಂಕರಾಭರಣ

॥ ದೇಶಿ ಅಷ್ಟ ॥ ~~ಸಾರಂಗ~~ ಅಷ್ಟ ॥
ಮುನಿಯು ವಿಧವಿಧ ಮಂತ್ರವ ಪಠಿಸಲು ।
ಜನಿಸಿದವು ಭೂತಗಳು ಶೀಘ್ರದೊ- ।
ಳನಲಕಾಯನ ಕೊಲ್ಲಲು ॥ ೯೮ ॥

॥ ದೇಶಿ ಅಷ್ಟ ॥
ಬಂದ ವೇತಾಳವ್ರಾತವ ಕಾಣುತ ।
ಕೊಂದು ಮುಗಿಸಿದನಸುರನೆಲ್ಲವ ।
ತಿಂದು ತೇಗಿದ ಸುಲಭದಿ ॥ ೯೯ ॥

॥ ವಿಷ್ಣು ಷಟ್ಪದ ॥ ಆರ್ಯಸವಾಯ್ ಏಕ ॥ ಶರಷಟ್ಪದಿ ॥ (ಸಮೀಕೃತ)
ವರಬಲದಿಂದಲಿ ।
ಪರಿಪರಿ ತಂತ್ರವ ।
ವಿರಚಿಸಿ ಸೋತಿಹ ಪಾತಕಿಗೆ ॥
ಅರಿಯಿತು ಪುಣ್ಯದ ।
ಶರವಿರದಿರುವುದು ।
ಚರಿಸಿದ ಭರದಲಿ ನದಿಯೆಡೆಗೆ ॥ ೧೦೦ ॥

॥ ಶಹನಾ ಏಕ ॥ ವಿಷ್ಣು ಷಟ್ಪದ ॥ (ಸಮೀಕೃತ)
ತಾಪಸ ಭಯದಿಂದ ।
ಕೂಪವಿರ್ದೆಡೆಗಾಗಿ ।
ಪೋಪುದನೀಕ್ಷಿಸುತನಲಜನು ॥
ಕೋಪದಿಂದುದಕವ– ।
ನಾಪೋಶನವಗೈದು ।
ಪಾಪಿಯ ಬಿಡದೆ ಬೆನ್ನಟ್ಟಿದನು। । ೧೦೧ ॥
ಸುತ್ತನಾಲ್ದೆಸೆಗಳ ।
ಸುತ್ತಿದ ಯವಕ್ರೀತ ।
ಮತ್ತೆಲ್ಲಿ ಜಲವಿಹುದೆಂದರಸೆ ॥
ಎತ್ತ ನೋಡಿದರಬ್ಧಿ ।
ಬತ್ತಿ ಪೋದುದ ಕಂಡು ।
ತತ್ತರಿಸಿದ ಮೃತ್ಯು ಭಯವೆಣಿಸೆ ॥ ೧೦೨ ॥

॥ ಪುನ್ನಾಗ ಏಕ ॥
ಕೆಟ್ಟು ಪೋದೆನು । ಮುಟ್ಟಿ ಪೆಣ್ಣನು ॥
ದಿಟ್ಟಿ ತೆರೆಯಿತು । ಬಾಳ । ಬಟ್ಟೆ ಸುಟ್ಟಿತ ॥ ೧೦೩ ॥
ಪೇಳಲೇನಿದೆ । ವೇಳೆ ಕಳೆದಿದೆ ॥
ಲೀಲೆ ಮೆರೆದಿದೆ । ಮರಣ । ಕಾಲ ಬಂದಿದೆ ॥ ೧೦೪ ॥

॥ **ವಾರ್ಧಕ** ॥
ಎನುತ ಮುನಿ ದುಃಖಿಸುತ ದೆಸೆಗೆಟ್ಟು ತಿರುತಿರುಗಿ ।
ಜನಕನಾಶ್ರಮದಗ್ನಿಹೋತ್ರಶಾಲೆಗೆ ಸಾಗೆ ।
ಅನುಮತಿಯನೀಯದೆಲೆ ಶೂದ್ರರಕ್ಷಕನವನ ಬಾಗಿಲೊಳೆ ತಡೆದು ನಿಲಿಸೆ ॥
ಅನಲಾಂಗನಿದನರಿತು ರೈಭ್ಯನನು ನೆನೆನೆನೆದು ।
ಘನಶೂಲ ಧರಿಸುತ್ತ ಮುನಿಮುನಿದು ಬಳಿ ಬಂದು ।
ತನುವನಿರಿದಿರಿದು ನಿಲೆ ಬಿದ್ದು ಹೊರಳಾಡುತ್ತ ಯವಕ್ರೀತನುಸಿರು ತೊರೆದ ॥
॥ ೧೦೫ ॥

॥ **ಕಾಂಭೋಜ ಏಕ** ॥ **ರುದ್ರ ಷಟ್ಪದ** ॥ **ಭೋಗಷಟ್ಪದಿ** ॥ (ಸಮೀಕೃತ)
ತಂದೆಯೆಂದ ಕಾರ್ಯವನ್ನು ।
ಚಂದದಿಂದ ಗೈಯುತೀರ್ವ- ।
ರೊಂದುಗೂಡಿ ಬಂದು ರೈಭ್ಯ । ಗೊಂದಿಸುತ್ತಿರೆ ॥
ನಿಂದ ಯಜ್ಞಜಾತರತ್ತ ।
ಮಂದಹಾಸ ಬೀರಿ ಕೇಳ್ದ- ।
ನಂದು ಪೇಳ್ದ ಮಾಳ್ಕೆಯಂತೆ । ಕೊಂದು ಬಂದಿರೆ ॥ ೧೦೬ ॥

॥ **ಕಲ್ಯಾಣಿ ಆದಿ** ॥
ಆಲಿಸು ತಾತ ಮಾತ ।
ಪಾಲಿಸಿ ಬಂದೆವಿತ್ತ ॥ ಪ ॥
ತಂದಿತೆ ತೋಷವನು ।
ಮುಂದಿನ ಕಾರ್ಯವೇನು ॥
ಕುಂದದೆ ಗೈವೆವಿನ್ನು ।
ಎಂದು ನಿಂದಿರೆ ಪೇಳ್ದನು ॥ ೧೦೭ ॥

॥ **ನೀಲಾಂಬರಿ ತ್ರಿವುಡೆ – ೨** ॥
ತೃಪ್ತನಾದೆ ನಿಮ್ಮಯ ಕಾರ್ಯದಿ ।
ಗುಪ್ತರಾಗಿ ದುಷ್ಟರ ಶಿಕ್ಷಿಸಿ ॥
ಆಪ್ತರೊಲು ಕಷ್ಟದೊಳೊದಗುತ ।
ವ್ಯಾಪ್ತಿಮೀರದೆಲೆ ನೀವು ಜೀವಿಸಿ ॥ ೧೦೮ ॥

॥ **ಭಾಮಿನಿ** ॥
ಇನಿತು ಪೇಳುತ ರೈಭ್ಯನೀರ್ವರಿ- ।
ಗನುಮತಿಯನೀಯುತ್ತ ಹರಸಲು ।
ಮಣಿದು ಜನಕಗೆ ವಚನವಿತ್ತಲ್ಲಿಂದ ಬೀಳ್ಗೊಳಲು ॥
ಮುನಿಪತಿಯು ಶೃಂಖಲೆಯ ಕರೆಯುತ ।
ವನದ ರಕ್ಷಣೆ ಹೊಣೆಯ ವಹಿಸುತ ।
ಘನತಪದ ಸಂಕಲ್ಪದಿಂ ಪೊರವಂಟ ಕಾನನಕೆ ॥ ೧೦೯ ॥

॥ ಕೇದಾರಗೌಳ ಅಷ್ಟ ॥

ತನುಜಾತನನು ಕಾಂಬ । ಮನದಿ ಭರದ್ವಾಜ– ।
ಮುನಿಯಾಶ್ರಮಕೆ ಬಂದನು ॥
ಎನಿತು ಪೊತ್ತಾದರಾ– । ತನು ಬಾರದಿರೆ ತಾನೆ ।
ವನದಲಿ ಹುಡುಕಿದನು ॥ ೧೧೦ ॥
ಹುಸಿಕೋಪ ತಾಳುತ್ತ । ಪೆಸರೆತ್ತಿ ಕೂಗುತ ।
ದೆಸೆದೆಸೆ ಪರಿಕಿಸುತ ॥
ಉಸಿರಾಟನಿಲ್ಲಿಸಿ । ಜಸವಳಿದೊರಗಿದ ।
ಪಸುಳೆಯ ಮೊಗನೋಡುತ ॥ ೧೧೧ ॥

॥ ನೀಲಾಂಬರಿ ಝಂಪೆ ॥

ಹಾ ಕುವರ ಮುನಿಕುಲದ ದೀಪ । ನೀನೆನ್ನ– ।
ನೇಕೆ ಬಿಟ್ಟೈದಿದೆಯೊ ಕಂದರ್ಪ ರೂಪ ॥
ಸಾಕಾಯ್ತೆ ಮಮಸಂಗ ನಿನಗೆ । ತಪಗೈದು ।
ಬೇಕಾದ ವರಪಡೆದು ಗತಿಸಿದೆಯ ಹೀಗೆ ॥ ೧೧೨ ॥
ಏನಾಯ್ತು ಪೇಳಯ್ಯ ಕಂದ । ಯಾರಿಂದ ।
ಪ್ರಾಣ ಹೋಯ್ತೆಂದು ನುಡಿ ಬಾಳಿನಾನಂದ ॥
ನೀನರುಹದಿರಲೆಂತು ತಿಳಿವೆ । ಎದ್ದು ಬಾ ।
ಮಾನಸಕೆ ಮುದ ನೀಡು ಬಳಲಿ ನಿಂದಿರುವೆ ॥ ೧೧೩ ॥
ಇನಿತು ಮೃತಸುತನನೆತ್ತುತ್ತ । ಮುನಿಪಾಲ ।
ಮನದಿ ಮರುಗುತ ಚಿತ್ತಶಾಂತಿ ತೊರೆಯುತ್ತ ॥
ಅನುಮಾನಿಸುತ ದಂಡ ಪಿಡಿದು । ಕಣ್ಮುಚ್ಚಿ ।
ಕ್ಷಣದೊಳುರೆ ದಿವ್ಯದೃಷ್ಟಿಯೊಳರಿತು ಕುದಿದು ॥ ೧೧೪ ॥

॥ ಮಾರವಿ ಏಕ ॥ ಕೇದಾರಗೌಳ ಅಷ್ಟ ॥ (ಸಮೀಕೃತ)

ಕೊಂದವರಿಗೆ ಕೊಲೆ । ಯೆಂದಿಗು ತಪ್ಪದು ।
ಬಂದುದ ನೋಡುವೆನು ॥
ಮುಂದಕೆ ಪಿರಿಸುತ । ನಿಂದಲೆ ರೈಭ್ಯನು ।
ಹೊಂದಲಿ ಮೃತ್ಯುವನು ॥ ೧೧೫ ॥

॥ ಮಾರವಿ ಏಕ ॥

ಕೊಟ್ಟೆನು ಶಾಪವ । ಕೆಟ್ಟೆನು ಶಿವಶಿವ ।
ಸಿಟ್ಟಿನೊಳಿಂತಾಯ್ತು ॥
ಹುಟ್ಟಿದ ಕಂದನು । ಬಿಟ್ಟನು ತನ್ನನು ।
ಬಟ್ಟೆಯು ಬರಿದಾಯ್ತು ॥ ೧೧೬ ॥

॥ **ತುಜಾವಂತು ಝಂಪೆ** ॥

ಪುತ್ರವಿರಹಿತ ಪಿತನು । ಪತ್ರಫಲರಹಿತ ತರು ।
ಪುತ್ರಶೋಕವು ನಿತ್ಯ ಬಾಧಿಸದೆ ಬಿಡದು ॥
ಪುತ್ರರತ್ನವನಿಂತು । ಮಿತ್ರ ರೈಭ್ಯನೆ ಕೊಂದ ।
ಪುತ್ರ ಸುಚರಿತ್ರ ಸರ್ವತ್ರ ಕಾಣುವನು ॥ ೧೧೭ ॥
ಮೃತಸುತನ ನೆನೆಯುತ್ತ- । ಲತಿಹಿತರ ಶಪಿಸುವುದು ।
ಮತಿಯುತರ ಜೀವಿತದಿ ಪರಮಪಾತಕವು ॥
ಯತಿಯಾಗಿ ಮರೆತೆನಿದ । ಗತಿಯೆಂತು ಪಥವೆಲ್ಲಿ ।
ಪೃಥಿವಿ ಹೊರುವಳೆ ನನ್ನ ಲೋಕ ಮನ್ನಿಪುದೆ ॥ ೧೧೮ ॥

॥ **ಸೌರಾಷ್ಟ್ರ ತ್ರಿವುಡೆ** ॥

ಕೋಪದಲಿ ಮತಿಗೆಟ್ಟು ಬಗೆಯದೆ ।
ತಾಪಸೋತ್ತಮನಾದ ಸಖನಿಗೆ ॥
ಶಾಪವಿತ್ತೆನು ದೋಷಿಯಹೆನಾ- । ಕ್ಷೇಪ ಸಹಿಸೆ ॥ ೧೧೯ ॥
ಕೊಂದವರು ಕೊಲೆಯಾಪರೆನ್ನುವು- ।
ದಿಂದು ತನಗನ್ವಯಿಸದುಳಿವುದೆ ॥
ಎಂದಿಗಾದರು ಕೆಡುವೆವೀ ತನು- । ವಿಂದ ಸುಖವೆ ॥ ೧೨೦ ॥
ಕಾವನಾವನು ಕೊಲುವನಾವನು ।
ಆ ವಿಧಾತನೆ ಸೂತ್ರಧಾರನು ॥
ನೋವುನಲಿವಿನ ಬಾಳಿಗಿಂತಲು । ಸಾವೆ ಮಿಗಿಲು ॥ ೧೨೧ ॥
ಎಂದು ಹಲವಂದದಲಿ ಮುನಿಪನು ।
ಕಂದನಗಲಿಕೆಯಿಂದ ಬೇಯುತ ॥
ಬಂದು ಯೋಗಾಗ್ನಿಯಲಿ ಮರಣವ । ಹೊಂದಿರಲ್ಕೆ ॥ ೧೨೨ ॥

॥ **ಕಾಂಬೋಧಿ ಝಂಪೆ** ॥

ಧರಣಿಪ ಬೃಹದ್ಯುಮ್ನ । ಪುರಜನರ ಪಾಲಿಸುತ ।
ವರಸತ್ರ ವಿರಚಿಸಲು ಬಯಸಿ ॥
ಗುರುರೈಭ್ಯರಿಲ್ಲದಿರೆ । ಕರೆಸುತಲಿ ಗುರುಸುತರ ।
ಅರುಹಿದನು ಸಕಲ ಕಾರ್ಯಗಳ ॥ ೧೨೩ ॥
ಜನಪಾಲ ಹೊಣೆ ವಹಿಸ- । ಲನುವಾದರೀರ್ವರಾ- ।
ತನ ಮಖದಿ ಋತ್ವಿಕ್ಕುವಾಗಿ ॥
ಇನಿತು ಗೈಯುತ ಕೆಲವು । ದಿನ ಕಳೆಯಲನುಜನನು ।
ಸನಿಹಕೆ ಪರಾವಸುವು ಕರೆದು ॥ ೧೨೪ ॥

॥ ಕಲ್ಯಾಣಿ ಅಷ್ಟ ॥

ಕೇಳಯ್ಯ ಸಹಜ ನೀನು । ಮಾತೊಂದನು ।
ಪೇಳುವೆ ನಿನ್ನೊಳಿನ್ನು ॥
ಭೂಲಲಾಮನ ಸತ್ರವೆಸಗುತ ।
ಕಾಲ ಕಳೆದುದೆ ತಿಳಿಯದಾದೆವು ।
ಶೀಲೆ ಸತಿಯನು ಕಂಡು ಶೀಘ್ರದಿ ।
ನಾಳಿನುದಯಕೆ ಬಂದರಾಗದೆ ॥ ೧೨೫ ॥
ಅಣ್ಣ ಚಿಂತಿಪುದೇತಕೆ । ಈ ಕಾರ್ಯಕೆ ।
ಎನ್ನೊಳು ಕೇಳ ಬೇಕೆ ॥
ನಿನ್ನ ಕಾಂತೆಯ ನೀನು ಕಾಣಲು ।
ಸಣ್ಣವನ ಸಹಮತವು ಮುಖ್ಯವೆ ।
ಗಣ್ಯಪುರುಷನೆ ಬರಿದೆ ಕೊರಗುವು- ।
ದನ್ನು ನಿಲ್ಲಿಸಿ ತೆರಳು ನಿಲಯಕೆ ॥ ೧೨೬ ॥

॥ ಬೇಗಡೆ ಏಕ ॥

ಪೋಗಿ ಬರುವರೆ ಬಯಕೆ ಹೆಚ್ಚುತಿದೆ । ಧರಣಿಪಗೆ ಪೇಳಲು ।
ಆಗದೆಂಬನು ಕಾರ್ಯಭಾರವಿದೆ ॥
ಯಾಗದಲಿ ಋತ್ವಿಕ್ಕುವಾಗಿಹೆ ।
ನೀಗ ಮಧ್ಯಂತರದಿ ಪೋಪುದು ।
ಹೇಗೆ ಸರಿಯಾಗುವುದು ಗೌಪ್ಯದಿ ।
ಸಾಗಿದರೆ ಹೊಣೆ ಹೊರುವರಿರುವರೆ ॥ ೧೨೭ ॥
ಕಾಲ ಯಾವುದು ನೋಡು ನೀ ಮುನ್ನ । ಮುಸ್ಸಂಜೆಯಾದುದು ।
ನಾಳೆಗಿನ್ನೆಷ್ಟಿಹುದು ಹೊತ್ತಣ್ಣ ॥
ಪೇಳು ನೀನೆಲ್ಲವನು ಗೈಯುವೆ ।
ತಾಳಲೇತಕೆ ಚಿಂತೆ ನಾನಿಹೆ ।
ವೇಳೆಗಳೆಯದೆ ಪೋಗು ಧಾತ್ರೀ- ।
ಪಾಲನಿಗೆ ನಿಜ ತಿಳಿಸಲಾರೆನು ॥ ೧೨೮ ॥

॥ ವಾರ್ಧಕ ॥

ಅನುಜಾತನಿಂತು ಧೈರ್ಯವ ಪೇಳಿ ಕಳುಹಲ್ಕೆ ।
ವನಿತೆಯನು ನೆನೆಯುತ್ತ ನಡೆತರೆ ಪರಾವಸುವು ।
ವನದ ತನ್ಮಧ್ಯ ರಾತ್ರಿಯೊಳಾಗ ರೈಭ್ಯಮುನಿ ಸಂಚರಿಸುತಿರಲೋರ್ವನೆ ॥
ತನುವಿನೊಳು ಕೃಷ್ಣಾಜಿನವು ಮೆರೆವುದನು ಕಂಡು ।
ಜನಕನೆಂದರಿಯದೆಯೆ ಮೃಗವೆಂದು ಬಗೆದಾತ ।
ಹನನ ಗೈದನು ಶಾಪಫಲದಿಂದ ಬಳಿಕ ನಿಜಸಂಗತಿಯನರಿತು ಮರುಗಿ ॥೧೨೯

॥ **ನೀಲಾಂಬರಿ ರೂಪಕ** ॥
ಏತಕೆ ಬಂದೆನೊ ನಿಶಿಯಲಿ ।
ತಾತನ ಬಗೆ ತಿಳಿಯದೆಯೆ ವಿ– ।
ಘಾತವನೆಸಗಿದೆ ಲೋಕದಿ ।
ಪಾತಕಿಯಾದೆನಲ ॥
ಭೂತಳ ಹೊರುವುದೆ ಸುಮನಸ ।
ವ್ರಾತವು ಪೊರೆವುದೆ ಸತ್ರವ ।
ಸೂತಕದಲಿ ಮನ್ನಡೆಸುವು– ।
ದೇತರ ಸರಿಯಹುದು ॥ ೧೩೦ ॥

॥ **ದ್ವಿಪದಿ** ॥
ಎಂದು ದುಃಖಿಸುತಾಗ ರೈಭ್ಯಜನು ಭರದಿ ।
ಬಂದು ಸಹಜಾತನಿಗೆ ಪೇಳ್ದನೀ ತೆರದಿ ॥ ೧೩೧ ॥

॥ **ಸೌರಾಷ್ಟ್ರ ಅಷ್ಟ** ॥
ತಂದೆಯ ಕೊಂದಿಹ ಪಾತಕಿಯಾದೆನು । ತಮ್ಮ ಕೇಳು ॥ ಎನಗೆ ।
ಬಂದಿತು ಬ್ರಹ್ಮಹತ್ಯಾದೋಷವಿದರಿಂದ । ತಮ್ಮ ಕೇಳು ॥
ಇಂದಿನ ಯಾಗದ ಬಗೆ ನೀನು ತಿಳಿದಿಲ್ಲ । ತಮ್ಮ ಕೇಳು ॥ ನಾನು ।
ಹೊಂದಿಹೆ ಜ್ಞಾನವ ಮುಂದಾಗಲಾಗದು । ತಮ್ಮ ಕೇಳು ॥ ೧೩೨ ॥
ಹಾಗಾಗಿ ದೋಷವ ನೀಹೊತ್ತುಕೊಂಬುದು । ತಮ್ಮ ಕೇಳು ॥ ಇದಕೆ ।
ಬೇಗೊಂದು ಪರಿಹಾರವ್ರತ ಮಾಡು ಶುಚಿಯಾಪೆ । ತಮ್ಮ ಕೇಳು ॥
ಸಾಗುವೆ ನಾನಿತ್ತ ನಿಶ್ಚಿಂತೆಯನು ತಾಳು । ತಮ್ಮ ಕೇಳು ॥ ನೃಪನ ।
ಯಾಗದ ಕೊನೆಯಲಿ ಮತ್ತೆ ಸೇರುವ ನಾವು । ತಮ್ಮ ಕೇಳು ॥ ೧೩೩ ॥

॥ **ಭಾಮಿನಿ** ॥
ಅಣ್ಣನಾಜ್ಞೆಯ ಧರಿಸಿ ವೇದವು ।
ಬಣ್ಣಿಸಿದ ಮಾರ್ಗದೊಳು ರೈಭ್ಯಜ ।
ಮುನ್ನ ಪಡೆದಾ ಬ್ರಹ್ಮಹತ್ಯಾದೋಷ ತೊಲಗಿಸುತ ॥
ಹೊನ್ನ ತೇಜದಿ ಮೆರೆಯುತಗ್ರಜ– ।
ನನ್ನು ಕಾಣುತ ಮಣಿಯೆ ಸಹಜನ ।
ಸನ್ನೆಯಲಿ ತಡೆಯುತ ಪರಾವಸು ನೃಪತಿಗಿಂತೆಂದ ॥ ೧೩೪ ॥

॥ **ಸೌರಾಷ್ಟ್ರ ಮಟ್ಟೆ** ॥
ಅರಸ ಕೇಳು ಸಹಜನೀತನು । ಬ್ರಹ್ಮಹತ್ಯೆ ಗೈದು ಬಂದ ।
ಪರಮಪಾಪಿ ದೋಷಯುಕ್ತನು ॥
ದುರುಳನಿವನು ಯಜ್ಞಶಾಲೆ ।
ಪರಿಕಿಸಲ್ಕೆ ನಿತ್ಯ ಕೇಡು ।
ಪುರವು ನಾಶವಾಪುದಿನ್ನು ।
ಚರರನಟ್ಟಿ ಕಳುಹು ಬೇಗ ।
ಮರಳಿ ಬರದ ತೆರದಿ ಕಾಡಿಗೆ । ಎನಲು ರಾಯ ।
ಕರೆದು ಪ್ರಶ್ನೆ ಕೇಳ್ದನಾತಗೆ ॥ ೧೩೫ ॥

॥ **ರೇಗುಪ್ತಿ ಅಷ್ಟ** ॥
ಯಾರು ನೀನೇಕೆ ಬಂದೆ? । ಊರಾವುದು? ।
ಯಾರಯ್ಯ ನಿನ್ನ ತಂದೆ? ॥ ಪ ॥
ಧಾರಿಣೀಶನೆ ಕೇಳು ನಾನರ್ವಾವಸು ಮುನಿ ।
ಆ ರೈಭ್ಯಸುತರೊಳು ಕಿರಿಯವನಾಗಿಹೆ ॥ ಅ.ಪ ॥
ಜನಪನ ಯಾಗ ಬಿಟ್ಟೇಕೆ ದೂರಕೆ ಪೋದೆ? ।
ಘನವಾದ ಕಾರ್ಯಕಾರಣಗಳೇನು? ।
ಜನಕ ಸ್ವರ್ಗಸ್ಥನಾದುದರಿಂದ ಪೋದೆನು ।
ಮುನಿಗಳು ಯಾರಿಂದ ತನುತೊರೆದರು ಪೇಳು? ।
ತನಯನೆ ಕೊಂದಿಹನು । ಅಗ್ರಜನೀತ ।
ನೆನಗೆ ದೋಷವನಿತ್ತನು । ಪರಿಹರಿಸಿಹೆ ।
ಮನವಿಟ್ಟು ನಂಬು ನೀನು । ನಡೆದಿಹುದನ್ನು ।
ಎನಲು ಭೂಪತಿ ಚೋದ್ಯವಾಂತು ನಿಂದಿರಲಾಗ ॥ ೧೩೬ ॥

॥ **ಕಾಂಭೋದಿ ಝಂಪೆ** ॥ **ಸಾಂಗತ್ಯ** ॥ (ಸಮೀಕೃತ)
ಹೀಗೆ ಪೇಳಿದರೆನ್ನ । ಬೇಗ ನಂಬುವರೆಂದು ।
ಕೂಗಿಕೊಂಬನು ಭೂಮಿನಾಥ ॥
ಯಾಗಶಾಲೆಯ ಬಿಟ್ಟು । ಪೋಗದಿಲ್ಲಿಯೆ ನಿಂದೆ ।
ಈಗ ಬಂದವ ಧೂರ್ತ ನೀತ ॥ ೧೩೭ ॥

॥ **ಜಂಗಲಾ ಏಕ** ॥
ಗುರುತರಳರು ನುಡಿ- । ದಿರುವುದನಾಲಿಸಿ ।
ಧರಣಿಪ ಯೋಚಿಸುತ ॥
ಸರಿತಪ್ಪರಿಯದೆ । ಪರಿಕಿಸುವಾತನ ।
ಪರಿಯರಿತರ್ವಾವಸು ನಗುತ ॥ ೧೩೮ ॥

॥ **ಜಂಗಲಾ ಏಕ** ॥

ಚಿಂತೆಯ ಬಿಡು ಭೂ- । ಕಾಂತನೆ ಯೋಚಿಸು ।
ವಂತಹುದೇನಿಹುದು ॥
ಸಂತಸದಲಿ ನಾ । ಪಿಂತಿರುಗುವೆ ಯತಿ- ।
ಸಂತಾನಕೆ ತಪಬಲ ಪಿರಿದು ॥ ೧೩೯ ॥

॥ **ವಾರ್ಧಕ** ॥

ಎನುತಲರ್ವಾವಸುವು ಪುರದಿಂದ ಪೊರವಂಟು ।
ವನಸೇರಿ ಶುಚಿಯಾಗಿ ಪದ್ಮಾಸನವ ಬಲಿದು ।
ಮನದೊಳುರೆ ಗಾಯತ್ರಿಮಂತ್ರಮಂ ಪಠಿಸುತ್ತ ಸವಿತೃದೇವನ ನುತಿಸುತ ॥
ತನುವ ದಂಡಿಸುತ ನಿದ್ರಾಹಾರ ತೊರೆಯುತ್ತ ।
ಘನತಪವನಾಚರಿಸೆ ಸಂವತ್ಸರಗಳುರುಳೆ ।
ದಿನಮಣಿಯ ಮಹಿಮಾಪ್ರಕಾಶದ ರಹಸ್ಯವೇದಕೆ ತಾನು ಋಷಿಯಾದನು॥ ೧೪೦॥

॥ **ತುಜಾವಂತು ಝಂಪೆ** ॥

ಒಂದು ಶುಭಮುಂಜಾನೆ- । ಯಂದು ಕೊಡಲರ್ಘ್ಯವನು ।
ಬಂದನಿಳೆಯೆಡೆಗೆ ಬಾನ್ಮಣಿಯು ಬಾನಿಂದ ॥
ಚಂದದಿಂ ಮುನಿಪಾಲ । ವಂದಿಸುತ ನುತಿಸಲಾ- ।
ನಂದ ಹೊಂದುತ ಸೂರ್ಯದೇವನಿಂತೆಂದ ॥ ೧೪೧ ॥

॥ **ನವರೋಜು ಏಕ** ॥

ದರುಶನ ನೀಡಿಹೆ ಮುನಿಯೆ । ನೀ ।
ಬರಿಸಿದ ಕಾರಣವರಿಯೆ ॥
ಅರುಹೈ ಮಾನಸ । ದರಿಕೆಯನೆನ್ನೊಳು ।
ಕರುಣಿಸುವೆನು ಸಡ- । ಗರದಿಂ ಶೀಘ್ರದಿ ॥ ೧೪೨ ॥

॥ **ವಾರ್ಧಕ** ॥

ಒಲಿದು ಬಂದೆಯ ದೇವ ಮಂತ್ರಮಾರ್ಗವನಾಂತು ।
ಉಲಿಯಲಿನ್ನೇನಿಹುದು ಜನ್ಮಪಾವನವಾಯ್ತು ।
ಅಳಿದಿಹ ಭರದ್ವಾಜ ರೈಭ್ಯ ಯವಕ್ರೀತರಿಗೆ ಜೀವದಾನವನೀವುದು ॥
ಉಳಿಯದಿರಲಯ್ಯನಿಗೆ ಹತ್ಯೆಯಾಗಿಹ ನೆನಪು ।
ಇಳೆಯೊಳೆನ್ನನು ಬಿಡದೆ ಬಾಧಿಸುವ ನಿಂದೆಗಳ ।
ಕಳೆಯುತಗ್ರಜನ ನಿರ್ದೋಷಿಯಾಗಿಪುದೆಂದು ಪದಕೆರಗಿ ಸಂಸ್ತುತಿಸಲು ॥ ೧೪೩॥

॥ **ಕೇದಾರಗೌಳ ಅಷ್ಟ** ॥
ಮುನಿಯೆ ನಿನ್ನಯ ಶುದ್ಧ । ಮನವನು ಮೆಚ್ಚಿದೆ ।
ಎನಗತಿಪ್ರೀತ ನೀನೆ ॥
ನಿನಗಾಗಿ ಬಯಸದೆ । ಘನತಪವೆಸಗಿದೆ ।
ನೆನೆದುದೀವೆನು ನೋಡೆನೆ ॥ ೧೪೪ ॥

॥ **ಕಲ್ಯಾಣಿ ಏಕ** ॥
ಎದ್ದರು ಮುದದಲಿ । ಬಿದ್ದವರೆಲ್ಲರು
ನಿದ್ದೆಯ ತೊರೆದಂತೆ ॥
ಶುದ್ಧಾತ್ಮನು ತ– । ಮ್ಮುದ್ಧಾರಕೆ ಜೊತೆ ।
ಗಿದ್ದುದು ತಿಳಿದೊಡೆ ।
ಬುದ್ಧಿಯು ವೃದ್ಧಿಸೆ ॥ ೧೪೫ ॥

॥ **ಭಾಮಿನಿ** ॥
ಜಗದ ಕತ್ತಲೆ ಕಳೆದು ಬೆಳಗುವ ।
ಪಗಲಿನೊಡೆಯನ ದಿವ್ಯತೇಜದ ।
ಬಗೆಯ ಕಾಣುತಲೆಲ್ಲರಡಿದಾವರೆಗೆ ವಂದಿಸುತ ॥
ನಗುಮೊಗದಿ ಮುದಹೊಂದಿ ನಿಂದಿರ– ।
ಲಘವಿಮೋಚನೆಯಾದುದಾಕ್ಷಣ ।
ಸೊಗವಳಿದ ಯವಕ್ರೀತನರ್ಕನ ಬಳಿಗೆ ಬಂದೆಂದ ॥ ೧೪೬ ॥

॥ **ಕೇದಾರಗೌಳ ಅಷ್ಟ** ॥
ಮನದ ಸಂಶಯ ನೀಗು । ದಿನಮಣಿ ದೇವನೆ ।
ಎನಗಪಮೃತ್ಯುವೇನು ॥
ಮುನಿಗಣಮಾನಿತ । ಘನತಪೋನಿಧಿ ನಾನು ।
ಎನಿತು ಕೊಂದನು ರೈಭ್ಯನು ॥ ೧೪೭ ॥

॥ **ತುಜಾವಂತು ಝಂಪೆ** ॥
ಒರೆವೆ ಕೇಳಯ್ಯ ನೀ । ಗುರುವಿಲ್ಲದೆಲ್ಲವನು ।
ಅರಿತೆ ಗರ್ವವನಾಂತೆ ಹಿರಿತನವ ಮರೆತೆ ॥
ಪರಸತಿಯ ಕೆಡಿಸಿ ಭೂ– । ಸುರರನುರೆ ಹಿಂಸಿಸಿದೆ ।
ಪರಿಣಾಮ ಸತ್ತ್ವಬರಿದಾಗಿ ಮರಣಿಸಿದೆ ॥ ೧೪೮ ॥
ಹೊಂದಿರುವೆ ಮರುಜನ್ಮ । ವಿಂದು ರೈಭ್ಯಜನಿಂದ ।
ಕುಂದೆಣಿಸದಿರು ಜಗದ ನಿಯಮ ಪಾಲಿಪುದು ॥
ಹಿಂದೆ ಮಾಡಿದ ತಪ್ಪ– । ನೆಂದು ಮಾಡದಿರಿನ್ನು ।
ಮುಂದೆ ಶುಭವಾಗುವುದು ಗುರುಸೇವೆಯೆಸಗು ॥ ೧೪೯ ॥

॥ **ದ್ವಿಪದಿ** ॥
ಎನುತಲಾದಿತ್ಯ ಧರೆಯಿಂದ ಬೀಳ್ಗೊಳಲು ।
ಮುನಿಗಡಣವೊಂದಾಗಿ ಬೆರೆಯೆ ಮುನ್ನಿನೊಲು ॥ ೧೫೦ ॥
ಬಳಿಕ ಯವಕ್ರೀತ ತೆರಳಿದನು ಗುರುವೆಡೆಗೆ ।
ಕಳೆಯೆ ನಲವತ್ತೆಂಟು ವರುಷಗಳು ಹೀಗೆ ॥ ೧೫೧ ॥
ಗುರುಕುಲದ ವಾಸದಲಿ ಗುರುಸೇವೆ ಗೈದು ।
ನಿರತಾಧ್ಯಯನದಿಂದ ವಿದ್ಯೆಯನು ತಿಳಿದು ॥ ೧೫೨ ॥
ಘನತಪೋನಿಧಿಯಾದ ಲೋಕ ಮಾನಿಸಿತು ।
ಎನುತ ಧರ್ಮಜಗೆ ಲೋಮಶರೊರೆದರಿಂತು ॥ ೧೫೩ ॥

॥ **ವಾರ್ಧಕ** ॥
ಗುರುವಿನಿಂದಾರುಣಿಗೆ ವೇದಶಾಸ್ತ್ರಗಳೊಲಿಯೆ ।
ಗುರುವಿನಿಂದುಪಮನ್ಯು ಸುಜ್ಞಾನಿಯೆನಿಸಿದನು ।
ಗುರುವಿನಿಂ ವೇದತಾ ಮೇಧಾವಿಯಾಗಿಹನು ಗುರುವಿನಿಂ ಜಗದೇಳ್ಗೆಯು ॥
ಗುರುವಿನಿಂದಮರೇಂದ್ರ ಸುರಪುರದಿ ಸುಸ್ಥಿರನು ।
ಗುರುವಿನಿಂದಜನು ಹರಿ ರುದ್ರಾದ್ಯರತಿಬಲರು ।
ಗುರುವಿನಿಂದಖಿಲಸಂಪದವು ಯಶಕೀರ್ತಿಯಿಹಪರಪುಣ್ಯ ಸಂಪ್ರಾಪ್ತಿಯು ॥ ೧೫೪॥

॥ **ವಸಂತ ಏಕ** ॥
ಮಂಗಲ ಜಯ ಜಯತು । ಬ್ರಹ್ಮಾಂಡದ ।
ತುಂಗಬಲಗೆ ಜಯತು ॥ ಪ ॥
ಮಾರುತಜಾತನ । ಚಾರುಪದಾಬ್ಜಕೆ ।
ಏರಿಸಿ ಮನಸುಮ । ದಾರತಿ ಬೆಳಗುವೆ ॥ ೧೫೫ ॥

॥ **ಸೌರಾಷ್ಟ್ರ ಏಕ** ॥ **ಕೇದಾರಗೌಳ ಏಕ** ॥ (ಸಮೀಕೃತ)
ಮಂಗಲ ಜಯ ಜಯ ಮಂಗಲವು ॥ ಪ ॥
ಸರಸಿಜಲೋಚನ ರಾಮನಿಗೆ ।
ಸರಸಿಜನಾಭ ಮುಕುಂದನಿಗೆ ।
ಸರಸಿಜಸಂಭವ ಬೊಮ್ಮನಿಗೆ ।
ಸರಸಿಜಪೀಠನ ಕಾಮಿನಿಗೆ ॥ ೧೫೬ ॥

............................ಯವಕ್ರೀತ ವೃತ್ತಾಂತಂ ಮುಕ್ತಾಯಂ......................

ಒಟ್ಟು ಪದ್ಯಗಳು = ೧೫೫, ಒಟ್ಟು ಮಟ್ಟು (ಛಂದಸ್ಸು)ಗಳ ಸಂಖ್ಯೆ = ೭೦
ಸಮೀಕೃತ ಬಂಧಗಳು – ೯

॥ **ವಾರ್ಧಕ** ॥

ಇಂತಾ ಸುದಾಮ ನಿಜಸತಿಸುತರ ನೆರಹುತ್ತ ।
ಕಂತುಪಿತನಡಿದಾವರೆಯ ಸೇವೆಯಲಿ ತೊಡಗಿ ।
ಸಂತಸದಿ ಹರಿಯಿತ್ತ ಸಂಪದವ ಕಾಮಿಸದೆ ಲೋಕಹಿತಕದ ಬಳಸುತ ॥
ಅಂತರಂಗದಿ ಭಕ್ತಿಸುಧೆ ಸವಿದು ಮುದಗೊಳುತ ।
ಮುಂತೆ ನೆಲೆಸಿರ್ದ ಗುಡಿಸಿಲೊಳೆ ವಾಸಿಸೆ ಬಯಸಿ ।
ಚಿಂತೆಯಿಲ್ಲದೆ ಬಾಳುತಿರಲು ಶ್ರೀಕೃಷ್ಣ ಕಾರುಣ್ಯ ಲಭಿಸಿತು ವಿಪ್ರಗೆ ॥ ೫೯ ॥

॥ **ಕೇದಾರಗೌಳ ಅಷ್ಟ** ॥

ಮಂಗಲಮೂರ್ತಿ ಶ್ರೀ । ರಂಗಸ್ವಾಮಿಗೆ ಕೋಮ-।
ಲಾಂಗಗೆ ಶುಭಮಂಗಲಂ ॥
ಅಂಗಜಪಿತನಿಗೆ । ಶೃಂಗಾರಪ್ರಿಯನಿಗೆ ।
ಮಂಗಲಂ ಶುಭಮಂಗಲಂ ॥ ೬೦ ॥

............................ಶ್ರೀಕೃಷ್ಣ ಕಾರುಣ್ಯಂ ಮುಕ್ತಾಯಂ....................

ಒಟ್ಟು ಪದ್ಯಗಳು = 60, ಒಟ್ಟು ಮಟ್ಟು (ಛಂದಸ್ಸು)ಗಳ ಸಂಖ್ಯೆ = 21
ಸಮೀಕೃತ ಬಂಧಗಳು – 2

-: ಲೇಖಕರ ಕಿರು ಪರಿಚಯ :-

ಡಾ. ಶಿವಕುಮಾರ ಅಳಗೋಡು ಇವರು ಮೂಲತಹ ಶಿವಮೊಗ್ಗ ಜಿಲ್ಲೆಯ, ಹೊಸನಗರ ತಾಲ್ಲೂಕಿನ, ನಿಟ್ಟೂರು ಸಮೀಪದ ಅಳಗೋಡು ನಿವಾಸಿ. ಪ್ರಾಥಮಿಕ ಹಂತದಿಂದ ದ್ವಿತೀಯ ಪಿ.ಯು.ಸಿವರೆಗಿನ ಶಿಕ್ಷಣವನ್ನು ನಿಟ್ಟೂರಿನಲ್ಲಿಯೇ ಪೂರ್ಣಗೊಳಿಸಿ, ಪದವಿ ವಿದ್ಯಾಭ್ಯಾಸಕ್ಕೆಂದು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೆ ಸೇರಿ ಅಲ್ಲಿ ಬಿ.ಎ. ಮುಗಿಸಿದರು.

ಕನ್ನಡ ಎಂ.ಎ. ವ್ಯಾಸಂಗಕ್ಕೆಂದು ತೆಂಕನಿಡಿಯೂರು ಸರಕಾರಿ ಪ್ರಥಮದರ್ಜೆ ಕಾಲೇಜು ಸೇರಿ, 2017ರ ಮಂಗಳೂರು ವಿಶ್ವವಿದ್ಯಾಲಯದ ಅಂತಿಮ ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್‌ನೊಂದಿಗೆ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ಇವರು ಡಾ. ಅರುಣ್ ಕುಮಾರ್ ಎಸ್. ಆರ್. ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಇವರು ಸಲ್ಲಿಸಿದ 'ಯಕ್ಷಗಾನ ಪೂರ್ವರಂಗ ಅಧ್ಯಯನ' ಸಂಶೋಧನ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ. ಪ್ರಸ್ತುತ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪದವಿ ವಿಭಾಗದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಎಳವೆಯಿಂದಲೇ ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದ ಇವರು ಯಕ್ಷಗಾನ ಕಲಾವಿದರಾಗಿ, ತಾಳಮದ್ದಳೆ ಅರ್ಥಧಾರಿಗಳಾಗಿ ಪ್ರಸಂಗ ಕವಿಯಾಗಿ ಗುರುತಿಸಿಕೊಂಡಿದ್ದು, ಈವರೆಗೆ ಎಂಟು ವಿಭಿನ್ನ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಸ್ನೇಹಲೋಕ' (ಸಣ್ಣಕಥೆ), 'ಮಹೀಂದ್ರ ಮಹಾಭಿಷ' (ಪೌರಾಣಿಕ ಯಕ್ಷಗಾನ ಪ್ರಸಂಗ), 'ಮುನ್ನುಡಿ' (ಲಲಿತ ಪ್ರಬಂಧ), 'ಲೌಕಿಕದ ಬೆಳಗು' (ಪಂಪಭಾರತದ ವಿಮರ್ಶೆ), 'ಪದ್ಮಶ್ರೀ ಚಿಟ್ಟಾಣಿಯವರ ಕೊನೆಯ ದಿನಗಳು' ಹಾಗೂ 'ದೇವಸೇನಾ ಪರಿಣಯ' (ರಾಜ್ಯಮಟ್ಟದ ಪ್ರಸಂಗ ರಚನಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪುರಸ್ಕೃತ), 'ದಂಡಕ ದಮನ' (ಪೌರಾಣಿಕ ಯಕ್ಷಗಾನ ಪ್ರಸಂಗ), 'ಶ್ರೀವಿಷ್ಣುಮಾಯಮಾಹಾತ್ಮ್ಯಮ್' (ಕೇರಳದ ವಿಷ್ಣುಮಾಯ ದೇವರ ಮಹಾತ್ಮೆಗೆ ಸಂಬಂಧಿಸಿದ ಪ್ರಸಂಗ) ಇಷ್ಟೇ ಅಲ್ಲದೇ ಮಂಗಳೂರು ಆಕಾಶವಾಣಿಯಲ್ಲಿ ಇವರ ಕೆಲವು ಸಣ್ಣಕಥೆಗಳೂ, ಪತ್ರಿಕೆಗಳಲ್ಲಿ ಕೆಲವು ಲೇಖನಗಳೂ ಪ್ರಕಟಗೊಂಡಿವೆ. ಇವರಿಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು 2017ನೇ ಸಾಲಿನ ರಾಜ್ಯಮಟ್ಟದ 'ಜ್ಯೋತಿ ಪುರಸ್ಕಾರ'ವನ್ನು ಬೆಂಗಳೂರಿನ ಹವ್ಯಕ ಸಭಾ, 'ಯುವ ಪುರಸ್ಕಾರ' ನೀಡಿ ಗೌರವಿಸಿದೆ. ಇವರ ಮುನ್ನುಡಿ, ಚಿಟ್ಟಾಣಿಯವರ ಕೊನೆಯ ದಿನಗಳು, ಲೌಕಿಕದ ಬೆಳಗು ಈ ಮೂರು ಕೃತಿಗಳ 300 ಪ್ರತಿಗಳನ್ನು ಕರ್ನಾಟಕ ಸರಕಾರದ ಗ್ರಂಥಾಲಯ ಇಲಾಖೆ ಖರೀದಿಸಿದ್ದು ಮಹತ್ತ್ವದ ಸಂಗತಿಯಾಗಿದೆ.

ಡಾ. ಶಿವಕುಮಾರ ಅಳಗೋಡು ಯಕ್ಷಗಾನ ಕಾವ್ಯಲೋಕದಲ್ಲಿ ಅರಳುತ್ತಿರುವ ಹೊಸಪ್ರತಿಭೆ. ಯಕ್ಷಗಾನ ಛಂದಃಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನಮಾಡಿ, ನೂತನ ಪ್ರಸಂಗಗಳ ರಚನೆಯಲ್ಲಿ ಭರವಸೆ ಮೂಡಿಸಿದ ತರುಣಕವಿ. ಮೂಲತಃ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಿಟ್ಟೂರಿನವರು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರು. 'ಯಕ್ಷಗಾನ ಪೂರ್ವರಂಗ'ದ ಕುರಿತು ಸಂಶೋಧನಾತ್ಮಕ ಮಹಾಪ್ರಬಂಧವನ್ನು ಸಲ್ಲಿಸಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನೂ ಪಡೆದಿದ್ದಾರೆ. ಇದೀಗ ಅವರ 'ಯವಕ್ರೀತ ವೃತ್ತಾಂತ' ಮತ್ತು 'ಶ್ರೀಕೃಷ್ಣ ಕಾರುಣ್ಯ' ಎಂಬ ಎರಡು ಕೃತಿಗಳ ಸಂಕಲನ ಪ್ರಕಾಶಕ್ಕೆ ಬರುತ್ತಿದೆ. ಕಥಾವಸ್ತು, ಪಾತ್ರಸೃಷ್ಟಿ, ಭಾಷಾಶೈಲಿ, ರಂಗತಂತ್ರಗಳನ್ನು ಸಮುಚಿತವಾಗಿ ಬಳಸಿಕೊಂಡು ರಂಗದಲ್ಲಿ ಅಭಿನೀತಗೊಳ್ಳಲು ಯೋಗ್ಯವಾಗುವಂತೆ ಈ ಕೃತಿಗಳು ಮೂಡಿ- ಬಂದಿರುವುದು ವಿಶೇಷ. ಯಕ್ಷಗಾನ ಕಾವ್ಯದ ಭವಿಷ್ಯದ ದೃಷ್ಟಿಯಿಂದ ಇದು ಸಮಾಧಾನಕರ ಸಂಗತಿ ಎನ್ನಲೇಬೇಕು.

'ಯವಕ್ರೀತ ವೃತ್ತಾಂತ'ದಲ್ಲಿರುವುದು ಮಹಾಭಾರತದ ವನಪರ್ವದ ಕಥೆ. ಇದರಲ್ಲಿ ೧೧ ಪಾತ್ರಗಳ ಸುತ್ತ ಹೆಣೆದ ಒಟ್ಟು ೧೫೬ ಪದ್ಯಗಳಿವೆ. ವಿಶೇಷವೆಂದರೆ ಇಲ್ಲಿ ೭೦ ವಿವಿಧ ಛಂದೋಬಂಧಗಳಿವೆ. ಈ ಮೂಲಕ ಲಯವೈವಿಧ್ಯವನ್ನು ಸಾಧಿಸಿ ರಂಗದಲ್ಲಿ ಗಾನ-ನೃತ್ಯಗಳ ಅನನ್ಯತೆಗೆ ಪುಷ್ಟಿ ನೀಡಿದಂತಾಗಿದೆ. ಇವುಗಳಲ್ಲಿ ೮ ಸಮೀಕೃತ ಬಂಧಗಳಿರುವುದರಿಂದ ಕಲಾವಿದರ ಸೃಜನಶೀಲತೆಗೂ ಆಸ್ಪದ ನೀಡಿದಂತಾಗಿದೆ. 'ಶ್ರೀಕೃಷ್ಣ ಕಾರುಣ್ಯ' ಭಾಗವತದಲ್ಲಿ ಪ್ರಸಿದ್ಧವಾದ ಕುಚೇಲೋಪಾಖ್ಯಾನದ ಕಥೆಯನ್ನು ಒಳಗೊಂಡಿದೆ. ನಾಲ್ಕೇ ಪಾತ್ರಗಳಿರುವ ಒಟ್ಟು ೬೦ ಪದ್ಯಗಳುಳ್ಳ ಕಿರುಕೃತಿ. ಇದರಲ್ಲಿಯೂ ೨೧ ಛಂದೋಬಂಧಗಳು ಪ್ರಯೋಗಗೊಂಡಿವೆ. ಸಹಜಪ್ರಾಸ, ವರಣಸಂಯೋಜನೆ, ಪಲ್ಲವಿ-ಅನುಪಲ್ಲವಿಗಳ ಜೋಡಣೆಗಳಿಂದ ಈ ಬಂಧಗಳು ಮನೋಹರವೆನಿಸಿವೆ.

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
(ಮುನ್ನುಡಿಯಿಂದ)